# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026



Many audiences find print more trustworthy than digital.
Print offers permanence and tangibility that enhance brand credibility and build consumer trust.
1,10,000+
Digital E-PAPER READERS



No.1 HAMPI TIMES LEADING VIJAYANAGARA District News Paper
Contact for Advertisements: 9448633038



ಸಂಪುಟ:02 Volume:02 • ಸಂಚಿಕೆ: 186 Issue: 186 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 25.01.2025 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2


## ವಿಜಯನಗರ ಜಿಲ್ಲಾದ್ಯಂತ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆಣ್ಣು ಮಗುವಿನ ಜಾಗೃತಿ

# ಹೆಣ್ಣು ಮಗುವೆಂದು ರಾಗ ಎಳೆಯದಿರು ಹೆಣ್ಣಲ್ಲವೇ ನಿನ್ನ ಹೆತ್ತು ಪೋಷಿಸಿದವಳು

## ಹೆಣ್ಣಿಗೆ ಬೇಕಾಗಿರುವುದಾದರೂ ಏನು? ಅವಳ ಮುಂದಿನ ಸವಾಲುಗಳೇನು?





■ **ಹಂಪಿ ಟೈಮ್ಸ್ ಹೊಸಪೇಟೆ**

ಲಿಂಗ ತಾರತಮ್ಯವನ್ನು ಹೋಗಲಾಡಿಸುವ ಮನೋ ಭಾವ ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು. ಮನೆಯಲ್ಲಿ ಹೆಣ್ಣು ಮಗು ಹುಟ್ಟಿದಾಗ ಸಂಭ್ರಮಿಸುವ ವಾತವರಣ ನಾವೇ ನಿರ್ಮಾಣ ಮಾಡಿಕೊಳ್ಳಬೇಕು ಎಂದು ತಾಲೂಕು ವೈದ್ಯಾಧಿಕಾರಿ ಡಾ.ಬಸವರಾಜ್ ಸಿ ಹೇಳಿದರು.

ನಗರದ ಸರ್ಕಾರಿ 60 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆವತಿಯಿಂದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ನಿಮಿತ್ತ ಜರುಗಿದ ಕಾರ್ಯಕ್ರಮದಲ್ಲಿ ಮಾತನಾಡಿದರು. ಹೆಣ್ಣು ಗಂಡು ಎಂಬ ಬೇಧ ಭಾವ ಮಾಡಬಾರದು. ಎಲ್ಲರಿಗೂ ಸಮಾನ ಅವಕಾಶಗಳು ಇದ್ದು ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಲು ಅರಿವು ಹೆಚ್ಚಿಸಿಕೊಳ್ಳಬೇಕು ಎಂದರು.

ಜಿಲ್ಲಾ ಪಿ.ಸಿ. ಅಂಡ್ ಪಿ.ಎನ್.ಡಿ.ಟಿ. ವಿಷರ್ಯ ನಿರ್ವಹಕರು ಹಾಗೂ ಜಿಲ್ಲಾ ಆರೋಗ್ಯ ನಿರೀಕ್ಷಣಾದಿ ,ಕಾರಿ ಎಂ.ಧರ್ಮನಗೌಡ ಪ್ರಾಸ್ತಾವಿಕ ಮಾತನಾಡಿ, ಆಧುನಿಕ ಈ ಕಾಲಘಟ್ಟದಲ್ಲಿ ಗಂಡು-ಹೆಣ್ಣಿಗೆ ಸಮಾನ ಅವಕಾಶಗಳಿದ್ದು ಅವುಗಳನ್ನು ಪ್ರಯೋಜನ ಪಡೆಯಬೇಕು. ಸರ್ಕಾರ ಸೌಲಭ್ಯಗಳನ್ನು ಪಡೆದು ಹೆಣ್ಣು ಮಗುವಿಗೆ ಪರಿಪೂರ್ಣ ಶಿಕ್ಷಣ ಕೊಡಿಸಿದಾಗ ಹೆಣ್ಣು ಎಂದೆಂದಿಗೂ ಯಾರಿಗೂ ಹೊರೆಯಾಗಲಾರಳು. ಹೆಣ್ಣಿಲ್ಲದ ಜಗತ್ತು ಊಹಿಸಲು ಅಸಾಧ್ಯ. ಹೆಣ್ಣು ಮಗು ಹುಟ್ಟಿದರೆ ಮನೆಗೆ ಮಹಾಲಕ್ಷ್ಮಿ ಬಂದಿದ್ದಾಳೆಂದು ಭಾವಿಸಬೇಕು. ಜಿಲ್ಲಾದ್ಯಂತ ಹೆಣ್ಣು ಮಗುವನ್ನು ಉಳಿಸಿ ಬೆಳೆಸಿ- ಪೋಷಿಸುವ ಶಪಥ ಮಾಡೋಣ ಘೋಷವಾಕ್ಯದಡಿ ಈವರ್ಷ ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆ ಆಚರಿಸಲಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಸರ್ಕಾರಿ ಬಾಲಕಿಯರು ಪ್ರೌಢಶಾಲೆ(ಮಾಪು) ವಿದ್ಯಾರ್ಥಿನಿಯರು ಕೇಕ್ ಕತ್ತರಿಸಿ ಸಿಹಿ ಹಂಚಿ ತಿನಿಸಿ ಸಂಭ್ರಮಿಸಿದರು.

ಸಮಾಜ ಸೇವಕ, ವೀರಶೈವ ಲಿಂಗಾಯತ ಸಮಾಜದ ನಿಕಟಪೂರ್ವ ತಾಲೂಕು ಕಾರ್ಯದರ್ಶಿ ಕೆ.ರವಿಶಂಕರ್ ಈ ಸಂದರ್ಭದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿದ್ದ ತಾಯಿ-ಮಕ್ಕಳಿಗೆ ಹಣ್ಣು ಪೌಷ್ಠಿಕ ಆಹಾರಗಳ ಕಿಟ್ ನೀಡಿ ಶುಭಹಾರೈಸಿದರು. ವೀರಶೈವ ಲಿಂಗಾಯತ ಸಮಾಜದ ನಿಕಟಪೂರ್ವ ಅಧ್ಯಕ್ಷ ಎಚ್.ವಿ. ಶರಣ ಸ್ವಾಮಿ, ಪ್ರಭಾರಿ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಹರಿಪ್ರಸಾದ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಶುಶ್ರೂಣಾಧಿಕಾರಿ ವೀಣಾ ಹಾಗೂ ಆಸ್ಪತ್ರೆ ಸಿಬ್ಬಂದಿ ಇದ್ದರು. ಆರೋಗ್ಯ ಇಲಾಖೆ ಮತ್ತು ದಾನಿಗಳು ಪ್ರೋತ್ಸಾಹಕ್ಕೆ ಹೆಣ್ಣು ಮಗುವಿನ ಪೋಷಕರು ಖುಷಿಪಟ್ಟರು. ಹಣ್ಣುಮಕ್ಕಳ ದಿನಾಚರಣೆಯ ಆಚರಣೆಯಂಗವಾಗಿ ತಾಯಂದಿರು ತಮ್ಮ ಹೆಣ್ಣು ಮಗುವಿನೊಂದಿಗೆ ಸೆಲ್ಫಿ ತೆಗೆದುಕೊಂಡು ಆನಂದಿಸಿದರು.














**ಹೆ**ಣ್ಣು ಮಕ್ಕಳನ್ನು ಎಲ್ಲಿ ಗೌರವಿಸಲಾಗುತ್ತದೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ.ಈ ಮಾತು ಭಾರತೀಯ ಪರಂಪರೆಯಲ್ಲಿ ಹೆಣ್ಣುಮಗಳ ಸ್ಥಾನಮಾನವನ್ನು ಸೂಚಿಸುತ್ತದೆ. ಆದ್ದರಿಂದ ಹೆಣ್ಣಿಗೆ ಸಲ್ಲಬೇಕಾದ ಸ್ವಾತಂತ್ರ್ಯ ಮತ್ತು ಗೌರವಗಳನ್ನು ನೀಡಬೇಕು. ಈಗಿನ ಡಿಜಿಟಲ್ ಯುಗದಲ್ಲಿಯೂ ಹೆಣ್ಣಿನ ಮೇಲೆ ದೌರ್ಜನ್ಯ ನಡೆಯುತ್ತಿರುವುದು ವಿಷಾದನೀಯ.

ಗಂಡು ಮತ್ತು ಹೆಣ್ಣು ಸಮಾನರು ಇಲ್ಲಿ ಯಾರು ಹೆಚ್ಚಲ್ಲ ಕಡಿಮೆಯೂ ಅಲ್ಲ ಹೆಣ್ಣಾಗಿ ಹುಟ್ಟಿದವಳಿಗೆ ಸಮಾಜದಲ್ಲಿ ಸಮಾನತೆ ಮತ್ತು ಪ್ರೀತಿ ಸಮ ಪ್ರಮಾಣದಲ್ಲಿ ಸಲ್ಲಬೇಕಾಗಿದೆ.

ಹೆಣ್ಣನ್ನು ಶಕ್ತಿ ಜನನಿ ಮೂಲ ಸ್ವರೂಪಿಣಿ ಹೀಗೆ ಬಗೆ ಬಗೆಯಾಗಿ ವರ್ಣಿಸಿದರು ಹೆಣ್ಣು ಮಗುವೊಂದು ಜನಿಸಿದಾಗ"ಅಯ್ಯೋ ಹೆಣ್ಣು ಮಗುವ"ಎಂಬ ರಾಗವನ್ನು ಎಳೆಯುವುದು ನಮ್ಮ ಸಮಾಜ ಇನ್ನೂ ಬಿಟ್ಟಿಲ್ಲ. ಈ ಮನಸ್ಥಿತಿಗೆ ಕಾರಣ ಹೆಣ್ಣು ಒಂದು ಹೊರೆ, ಹೇಗಿದ್ದರೂ ಗಂಡನ ಮನೆಗೆ ಹೋಗುವವಳು ಹೆಣ್ಣು ಮಕ್ಕಳಿಂದ ಖರ್ಚು ಜಾಸ್ತಿ ಹೀಗೆ ಹಲವಾರು ಪೂರ್ವಾ ಗ್ರಹಗಳು,ನಮ್ಮದೇ ಸಮಾಜದ ಹಿಂದಿನ ಕಾಲದ ಕಟ್ಟುಪಾಡುಗಳು ವ್ಯವಸ್ಥೆಗಳು ಹಾಗೂ ಅಂಕುಡೊಂಕುಗಳು ಕಾರಣವಾಗಿವೆ.ಹೆಣ್ಣು ಮಗುವಿನ ಜನನವಾದೊಡನೆ ಸಂಭ್ರಮದ ವಾತಾವರಣ ಸೃಷ್ಟಿಯಾಗಬೇಕೆಂದು ಪ್ರತಿಯೊಂದು ತಾಯಿಯೂ ಬಯಸುತ್ತಾಳೆ. ಅದಲ್ಲದೆ ಹೆಣ್ಣಿಗೆ ಬಾಳ ಸಂಗಾತಿಯ ಆಯ್ಕೆ ವಿಷಯದಲ್ಲೂ ಅವಳ ಅಭಿಪ್ರಾಯವನ್ನು ಹಲವು ಬಾರಿ ಪರಿಗಣಿಸುವುದಿಲ್ಲ. ಹೆಣ್ಣು ವಿದ್ಯಾವಂತಳಾಗಿ ಉತ್ತಮವಾಗಿ ತೇರ್ಗಡೆಯಾಗಿದ್ದರೂ ಅವಳು ಉದ್ಯೋಗಕ್ಕೆ ಹೋಗುವುದೋ ಬೇಡವೋ ಎಂಬ ನಿರ್ಧಾರ ಬಹಳ ಸಲ ಆಕೆಯ ಪತಿ ಮತ್ತು ಮನೆಯವರ ಮೇಲೆ ಅವಲಂಬಿತವಾಗಿರುತ್ತದೆ.ಆದರೆ ಈ ಪರಿಸ್ಥಿತಿ ಬದಲಾಗಬೇಕು ಪ್ರತಿಯೊಂದು ಹೆಣ್ಣಿಗೆ ಅವಳಿಗೆ ಸಿಗಬೇಕಾದ ಸ್ಥಾನಮಾನ ಮೂಲಭೂತ ಸ್ವಾತಂತ್ರ್ಯ ಹಾಗೂ ಅಭಿಪ್ರಾಯಕ್ಕೆ ಮನ್ನಣೆ ನೀಡುವ ವಾತಾವರಣ ಸೃಷ್ಟಿ ಆಗಬೇಕಾಗಿದೆ.

ಹೆಣ್ಣು ಮಕ್ಕಳು ಮನೆ ಮತ್ತು ಮನೆಯ ಹೊರಗೂ ಗಂಡಿಗಿಂತ ಮಿಗಿಲಾಗಿ ದುಡಿದರೂ ,ಸೈಕಲ್ ನಿಂದ ಹಿಡಿದು ಬಾಹ್ಯಾಕಾಶ ಯಾನವನ್ನು ಯಶಸ್ವಿಯಾಗಿ ಮುಗಿಸಿ ಬಂದರೂ ಹೆಣ್ಣು ಮಕ್ಕಳ ಕಡೆಗಿನ ತಾರತಮ್ಯ ಅಸಡ್ಡೆ ಕಡಿಮೆಯಾಗಿಲ್ಲ.ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ನಾಣ್ಣುಡಿಯಂತೆ ಪ್ರತಿಯೊಂದು ಹೆಣ್ಣು ಮಕ್ಕಳು ಶಿಕ್ಷಿತರಾಗಬೇಕು.ಹೆಣ್ಣು ಭ್ರೂಣ ಹತ್ಯೆ, ದೇವದಾಸಿ ಪದ್ಧತಿ,ವೇಶ್ಯಾವಾಟಿಕೆ,ಬಾಲ್ಯವಿವಾಹ ',ಬಾಲಕಾರ್ಮಿಕ ಪದ್ಧತಿ, ಲೈಂಗಿಕಶೋಷಣೆ ಮತ್ತು ಇನ್ನಿತರ ಮಹಿಳೆಯರ ಮೇಲೆ ಆಗುವ ದೌರ್ಜನ್ಯಗಳು ಸಂಪೂರ್ಣವಾಗಿ ಇಲ್ಲವಾಗಬೇಕಾಗಿದೆ.

ಸಮಾಜದಲ್ಲಿ ಶಾಂತಿ ಹಾಗೂ ಹೆಣ್ಣು ಮಕ್ಕಳ ಮನಸ್ಸಿನಲ್ಲಿ ಸುಭದ್ರತೆಯ ಭಾವನೆಯ ಮೂಡಬೇಕಾಗಿದೆ.ಇವೆ ವಾತಾವರಣ ಹಳ್ಳಿ ಹಳ್ಳಿಗಳಲ್ಲೂ ವ್ಯಾಪಿಸಬೇಕಾಗಿದೆ. ಹೆಚ್ಚು ಹೆಣ್ಣು ಮಕ್ಕಳು ಶಿಕ್ಷಿತರಾಗಿ ಸಾಮಾಜಿಕ ಆರ್ಥಿಕ ರಾಜಕೀಯ ವಿಷಯಗಳಲ್ಲಿ ತಮ್ಮ ಯೋಗದಾನ ನೀಡುವಂತಹ ಮುಕ್ತ ವಾತಾವರಣ ಸೃಷ್ಟಿಯಾಗಬೇಕಾಗಿದೆ.ಕುಟುಂಬದಲ್ಲೂ ಹಿರಿಯರು ಪತಿ ಮಕ್ಕಳು ಆಕೆಯನ್ನು ಪ್ರೀತಿಸುವ ಅವಳ ಅಭಿಪ್ರಾಯಗಳಿಗೆ ಗೌರವ ಕೊಡುವ ವಾತಾವರಣವನ್ನು ನೀಡಬೇಕು ಎಂದಿಗೂ ಕೌಟುಂಬಿಕ ದೌರ್ಜನ್ಯ ಸಲ್ಲದು. ಮನೆಯಲ್ಲಿ ನೆಮ್ಮದಿ ಇದ್ದರೆ ಆಕೆಯೂ ಇನ್ನೂ ಸಮರ್ಥವಾಗಿ ಸಮಾಜದಲ್ಲಿ ತನ್ನ ಯೋಗದಾನ ನೀಡಬಲ್ಲಳು.ಮನೆಯವರ ಸಹಕಾರ ಪ್ರೀತಿ ನೆಮ್ಮದಿಯ ವಾತಾವರಣ ಅಗತ್ಯವಾಗಿ ಸೃಷ್ಟಿಯಾಗಬೇಕಾಗಿದೆ.

ಹೆಣ್ಣು ಮಕ್ಕಳು ಹಲವು ಕೆಲಸಗಳನ್ನು ಒಟ್ಟಿಗೆ ನಿಭಾಯಿಸಬಲ್ಲಹ ಸಾಮರ್ಥ್ಯ ಉಳ್ಳವರು.ಮನೆ ಮತ್ತು ಕಚೇರಿಯಲ್ಲೂ ದಕ್ಷವಾಗಿ ತಮ್ಮ ಹುದ್ದೆಗಳನ್ನು ನಿಭಾಯಿಸಬಲ್ಲರಾಗಿರುತ್ತಾರೆ.ಅವರು ಮುಕ್ತವಾಗಿ ಸಲಹೆ ನೀಡುವ ದೌರ್ಜನ್ಯದ ವಿರುದ್ಧ ಧ್ವನಿ ಎತ್ತುವ ವಾತಾವರಣ ಕಚೇರಿಗಳಲ್ಲೂ ಸೃಷ್ಟಿಯಾಗಬೇಕು.

ಈಗಂತೂ ಹೆಣ್ಣು ಮಕ್ಕಳು ಎಲ್ಲ ರಂಗದಲ್ಲೂ ತನ್ನ ಛಾಪನ್ನು ಊರುವಲ್ಲಿ ಯಶಸ್ವಿಯಾಗಿದ್ದಾರೆ. ರಾಜಕೀಯ ರಂಗದಿಂದ ಹಿಡಿದು ಐಟಿ ಕಂಪನಿಗಳ ಸಿಇಒಗಳಾಗಿ ಗಗನಯಾನವನ್ನು ನಿಭಾಯಿಸುವ ವಿಜ್ಞಾನಿಗಳಾಗಿಯೂ ಎಲ್ಲಾ ಕ್ಷೇತ್ರದಲ್ಲೂ ಗಂಡಿಗೆ ಸರಿಸಮನಾಗಿ ಸಾಧಿಸುತ್ತಿದ್ದಾರೆ.ಆದರೆ ಪೂರಕ ವಾತಾವರಣವಿಲ್ಲದೆ ಅನವಶ್ಯ ಒತ್ತಡ ಹೆಚ್ಚಾದಾಗ ಅವರ ಯೋಗದಾನಕ್ಕೆ ಸವಾಲಾಗುತ್ತದೆ.ಈ ಒತ್ತಡ ಪರಿಸ್ಥಿತಿ ತರುವ ದಣಿವು ಮಾನಸಿಕ ಹಿಂಸೆ ಮುಂತಾದ ಪರಿಣಾಮಗಳನ್ನು ಅನುಭವಿಸಿ ಹೇಳಲು ಆಗದೆ ಬಿಡಲು ಆಗದ ಪರಿಸ್ಥಿತಿಯ ಸವಾಲು ಬಹಳ ಹೆಣ್ಣು ಮಕ್ಕಳಿಗೆ ಇದೆ.

ಒಟ್ಟಾರೆ ತಮ್ಮ ಸುರಕ್ಷತೆ ಮಾನಸಿಕ ಭದ್ರತೆ ತಾರತಮ್ಯಗಳ ನಿವಾರಣೆ ಹತ್ತಿರದವರ ಪ್ರೀತಿಸಹಕಾರ ಹಾಗೂ ತಮ್ಮ ಸಾಮರ್ಥ್ಯ ಹಾಗು ಯೋಗದಾನ ಸಲ್ಲಿಸಿದಾಗ ಒಂದೊಳ್ಳೆಯ ಮಾತುಗಳು ಪೂರಕ ಪುರಸ್ಕಾರಗಳು ಆಕೆಯ ಮನೋಸ್ಥೈರ್ಯವನ್ನು ಹೆಚ್ಚಿಸುತ್ತವೆ. ಎಲ್ಲಾ ಸವಾಲುಗಳನ್ನು ಮೆಟ್ಟಿ ನಿಲ್ಲುವ ಮನೋಸ್ಥೈರ್ಯ ಹೆಚ್ಚಾಗುತ್ತದೆ.

ಹೆಣ್ಣುಮಕ್ಕಳು ಎಲ್ಲರಂಗದಲ್ಲೂ ಮುಂದೆ ಬರುತ್ತಿರುವುದರಿಂದಲೇ ದೇಶದ ಪ್ರಗತಿ ಸಾಧ್ಯವಾಗುತ್ತಿದೆ. ಮೊನ್ನೆ ನಡೆದ 75 ಗಣರಾಜ್ಯೋತ್ಸ ವದ ಪೇರೆಡ್ ನಲ್ಲಿ ಸೈನ್ಯದ ಮೂರು ವಿಭಾಗಗಳಿಂದ ಹೆಣ್ಣು ಮಕ್ಕಳೇ ಭಾಗವಹಿಸಿ ಹಲವಾರು ಆಕರ್ಷಕ ಕವಾಯತುಗಳನ್ನು ಮೆರೆದು ಪೇರೇಡಿಗೆ ರಂಗು ತಂದಿತ್ತರು. ಇತಿಹಾಸದಿಂದಲೂ ಹೆಣ್ಣು ಮಕ್ಕಳ ಪಾತ್ರ ಎಲ್ಲಾ ರಂಗದ ಪ್ರಗತಿಯಲ್ಲಿ ನಿರ್ಣಾಯಕವೆನಿಸಿದೆ.ಈ ನಿರ್ಣಾಯಕ ಪಾತ್ರಧಾರಿಗಳ ಸುಭದ್ರತೆಗೆ ಹಾಗೂ ಅವರು ಇನ್ನೂ ಹೆಚ್ಚು ಯೋಗದಾನ ಸಲ್ಲಿಸುವಂತಹ ವಾತಾವರಣ ಸೃಷ್ಟಿಸುವ ಕರ್ತವ್ಯದ ನಿಲುವು ಸಮಾಜದ್ದಾಗಲಿ.

– **ಚೇತನಾ ಭಾರ್ಗವ, ಬೆಂಗಳೂರು**

### ಹೆಣ್ಣು

ಜಗತ್ತಿನ ಮೂಲ ಸ್ವರೂಪಿಣಿ
ಜೀವ ಸಂಕುಲಕೆ ಪ್ರಾಣದಾಯಿನಿ
ಮಮತೆ ವಾತ್ಸಲ್ಯದ ಸಹನಾಮೂರ್ತಿ
ಎಲ್ಲೆಡೆ ಹರಡುತಿದೆ ಇವಳ ಕೀರ್ತಿ

ಬದುಕಿನ ಪಯಣದ ನಾಯಕಿ
ಸಂಸಾರ ನೌಕೆಯ ರಕ್ಷಕಿ
ಸೃಷ್ಟಿಯ ಆಧಾರ ಹೆಣ್ಣು
ಇವಳೇ ಸಂಸಾರದ ಕಣ್ಣು

ಅಪ್ಪ ಅಮ್ಮನ ಪಾಲಿನ ಭಾಗ್ಯವಂತೆ
ಮೆಟ್ಟಿದ ಮನೆ ಬೆಳಗಿದ ಗುಣವಂತೆ
ಕಷ್ಟವನ್ನು ಎದುರಿಸುವ ಧೈರ್ಯವಂತೆ
ಇವಳು ನಮ್ಮ ಮನೆಯ ಅದೃಷ್ಟವಂತೆ
ಹೆಣ್ಣನ್ನು ಹಡೆದಿರುವ ನಾನೇ ಪುಣ್ಯವಂತೆ

ಹೆಣ್ಣಿನ ಜನ್ಮವೇ ಪುಣ್ಯ
ಹೆಣ್ಣಿಲ್ಲದಿದ್ದರೆ ಎಲ್ಲವೂ ನಗಣ್ಯ
ಹೆಣ್ಣನ್ನು ಪೂಜಿಸುವವರೆಲ್ಲಾ ಧನ್ಯ.



ಹೆಣ್ಣು ಮಗು ಹುಟ್ಟಿದಾಕ್ಷಣ ಬೇಸರಿಸಿಕೊಳ್ಳುವ ಕಾಲಮಾನ ಇದಲ್ಲ. ಇಂದು ಹೆಣ್ಣು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರಗಳು ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳ ಸದುಪಯೋಗ ಪಡಿಸಿಕೊಂಡಾಗ ಹೆಣ್ಣು ಹೊರೆಯಲ್ಲ ಹೊನ್ನು ಎಂಬುದನ್ನು ಸ್ವತಃ ಪಾಲಕರೇ ಹೇಳುವಂತಾಗುತ್ತದೆ.

– **ಎಂ.ಎಸ್.ದಿವಾಕರ,** ಜಿಲ್ಲಾಧಿಕಾರಿಗಳು



ಜಿಲ್ಲೆಯಲ್ಲಿ ಲಿಂಗನುಪಾತ ಉತ್ತಮವಾಗಿದೆ. ಹೆಣ್ಣು ಮಕ್ಕಳ ಓದಿಗೆ ಮತ್ತು ಸ್ವಾವಲಂಬಿ ಜೀವನ ರೂಪಿಸಿಕೊಳ್ಳಲು ಸರ್ಕಾರದ ಯೋಜನೆಗಳು ಸಹಕಾರಿಯಾಗಲಿವೆ. ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿಸುವ ಹೊಣೆ ಎಲ್ಲರದ್ದಾಗಿದೆ. ಪಾಲಕರು ಹೆಣ್ಣು-ಗಂಡಿಗೆ ಸಮಾನ ಅವಕಾಶ ಕಲ್ಪಿಸಬೇಕು. ಹೆಣ್ಣನ್ನು ಪ್ರತಿಯೊಬ್ಬರೂ ಗೌರವಿಸಿ.

– **ಎಲ್.ಶಂಕರನಾಯ್ಕ,** ಜಿಲ್ಲಾ ವೈದ್ಯಾಧಿಕರಿಗಳು.



ಹೆಣ್ಣು ಮಕ್ಕಳು ಹುಟ್ಟಿದರೆ ಖುಷಿಪಟ್ಟು ಸಂಭ್ರಮಿಸ ಬೇಕು. ಬದಲಾದ ಕಾಲಘಟ್ಟ ದಲ್ಲಿ ಹೆಣ್ಣುಮಕ್ಕಳಿಗೆ ಉನ್ನತವಾಗಿ ಬೆಳೆ ಯಲು ಅನೇಕ ಅವಕಾಶಗಳಿವೆ. ಹೆಣ್ಣು ಮಕ್ಕಳನ್ನು ಗೌರವಯುತವಾಗಿ ಕಾಣಬೇಕು. ಹೆಣ್ಣಾಗಿ ಹುಟ್ಟಿದ್ದಕ್ಕೆ ನನಗೆ ಹೆಮ್ಮೆ ಇದೆ.

– **ಡಾ.ಸಿಂಧೂಶಾ** ವೈದ್ಯರು.
ತಾಯಿ ಮಕ್ಕಳ ಸರ್ಕಾರಿ ಆಸ್ಪತ್ರೆ, ಹೊಸಪೇಟೆ




ಹೊಸಪೇಟೆಯ ಸರ್ಕಾರಿ ತಾಯಿಮಕ್ಕಳ ಆಸ್ಪತ್ರೆಯಲ್ಲಿ ಹೆಣ್ಣು ಮಕ್ಕಳ ದಿನಾಚರಣೆ ಸಂಭ್ರಮ




ಹೂವಿನ ಹಡಗಲಿ ಸರ್ಕಾರಿ ಆಸ್ಪತ್ರೆಯಲ್ಲಿ ಹೆಣ್ಣು ಮಕ್ಕಳ ದಿನಾಚರಣೆ ಆಚರಿಸಿದರು.



ಹರಪನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಹೆಣ್ಣು ಮಕ್ಕಳ ದಿನಾಚರಣೆ ಆಚರಿಸಿದರು.



ಹಂಪಸಾಗರ ಸರ್ಕಾರಿ ಆಸ್ಪತ್ರೆಯಲ್ಲಿ ಹೆಣ್ಣು ಮಕ್ಕಳ ದಿನಾಚರಣೆ ಆಚರಿಸಲಾಯಿತು.

# ಕಲಾತ್ಮಕ ಚಿತ್ರಗಳ ಪ್ರೋತ್ಸಾಹಕ್ಕೆ ಪ್ರತಿ ಜಿಲ್ಲೆಗೂ 200 ಆಸನಗಳ ಮಿನಿ ಚಿತ್ರಮಂದಿರ ಸ್ಥಾಪನೆ: ಸಿ.ಎಂ ಘೋಷಣೆ



■ **ಹಂಪಿ ಟೈಮ್ಸ್ ಬೆಂಗಳೂರು**

ರಾಜ್ಯದಲ್ಲಿ ಪರಭಾಷಾ ಚಿತ್ರಗಳ ಟಿಕೆಟ್ ದರ ನಿಯಂತ್ರಣಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಜೊತೆಗೆ, ಕಲಾತ್ಮಕ ಚಿತ್ರಗಳ ಪ್ರೋತ್ಸಾಹಕ್ಕೆ ಪ್ರತೀ ಜಿಲ್ಲೆಗೂ 200 ಆಸನಗಳ ಮಿನಿ ಚಿತ್ರಮಂದಿರ ಸ್ಥಾಪನೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ರವೀಂದ್ರ ಕಲಾ ಕ್ಷೇತ್ರದಲ್ಲಿ ಕನ್ನಡ ಸೇನಾನಿ ಸಾ.ರಾ.ಗೋವಿಂದು ಅವರ ಅಭಿನಂದನ ಕಾರ್ಯಕ್ರಮದಲ್ಲಿ ಗೋವಿಂದು ಅವರನ್ನು ಸನ್ಮಾನಿಸಿ, ಅಭಿನಂದಿಸಿ ಮಾತನಾಡಿದರು. ಪಕ್ಕದ ರಾಜ್ಯಗಳಲ್ಲಿ ಪರಭಾಷಾ ಚಿತ್ರಗಳಿಗೆ ಟಿಕೆಟ್ ದರ ಎಷ್ಟಿದೆ ಎಂದು ಪರಿಶೀಲಿಸಿ ರಾಜ್ಯದಲ್ಲಿ ಅದಕ್ಕೆ ತಕ್ಕಂತೆ ನಿಯಂತ್ರಣ ತರುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವ ಪ್ರಯತ್ನ ಮಾಡುತ್ತೇನೆ ಎಂದರು.

ಕನ್ನಡ ಕೆಲಸಕ್ಕೆ ಸರ್ಕಾರ ಸದಾ ಮುಂದೆ ಇರುತ್ತದೆ. ದಿನಾಂಕ 27 ರಂದು ವಿಧಾನಸೌಧದ ಆವರಣದಲ್ಲಿ ತಾಯಿ ಭುವನೇಶ್ವರಿ ಪುತ್ಥಳಿ ಸ್ಥಾಪಿಸಲಾಗುವುದು ಎಂದರು.

ಗೋವಿಂದು ಅವರು ರಾಜ್ ಕುಮಾರ್ ಸಂಘದ ಅಧ್ಯಕ್ಷರಾಗಿ ಮಾಡಿದ ಕೆಲಸಗಳು ಸ್ಮರಣೀಯ. ರಾಜ್ ಅವರ ವಿನಯ, ಸಭ್ಯತೆ, ಸರಳತೆ ಇಡೀ ಮನುಷ್ಯ ಕುಲಕ್ಕೇ ಮಾದರಿ. ಡಾ.ರಾಜ್ ಕುಮಾರ್ ಅವರಿಗೆ ರಾಜ್ ಅವರೇ ಸಾಟಿ. ಇವರಿಗೆ ಸಾಟಿ ಆಗುವವರು ಯಾರೂ ಇನ್ನೂ ಬಂದಿಲ್ಲ ಎಂದರು.

ಡಾ.ರಾಜ್ ಅವರ ಗೋಕಾಕ್ ಚಳವಳಿಯಲ್ಲಿ ನಾನೂ ಅವರ ಭಾಷಣ ಕೇಳಲು ಹೋಗಿದ್ದೆ. ರಾಜ್ ಅವರಿಂದಾಗಿ ಕನ್ನಡ ಹೆಚ್ಚು ಶಕ್ತಿಯುತವಾಗಿ ಬೆಳೆಯಿತು ಎಂದರು.

ನಾನು ಕನ್ನಡ ಕಾವಲು ಸಮಿತಿಯ ಮೊದಲ ಅಧ್ಯಕ್ಷನಾದಾಗ ಸಾ.ರಾ. ಗೋವಿಂದು ಮತ್ತು ಹಿರಿಯ ಪತ್ರಕರ್ತ ವೆಂಕಟೇಶ್ ಅವರ ಪರಿಚಯ ಮೊದಲ ಬಾರಿ ಆಯಿತು. ಇವರ ಕನ್ನಡ ಪರ ಹೋರಾಟದ ಬಗ್ಗೆ ಆಗಲೇ ನನಗೆ ಅಭಿಮಾನ ಇತ್ತು. ನನಗೆ ಕನ್ನಡ ನಾಡು, ನೆಲ, ಭಾಷೆ, ಸಂಸ್ಕೃತಿ ಬಗ್ಗೆ ಅಪಾರ ಪ್ರೀತಿ, ಅಭಿಮಾನ ಇದೆ. ಇದನ್ನು ಗ್ರಹಿಸಿಯೇ ಆಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ನನ್ನನ್ನೇ ಕನ್ನಡ ಕಾವಲು ಸಮಿತಿಗೆ ಅಧ್ಯಕ್ಷನನ್ನಾಗಿಸಿದರು ಎಂದು ಸ್ಮರಿಸಿ, ಗೋವಿಂದು ಅವರ ಬದುಕು ಅವರ ಹೋರಾಟಗಳ ಕಾರಣದಿಂದಾಗಿ ಸಾರ್ಥಕವಾಗಿದೆ ಎಂದರು.

ನಾನು ಕೇಂದ್ರ ಸರ್ಕಾರಕ್ಕೆ ಬರೆಯುವ ಪತ್ರಗಳನ್ನು ಹೊರತುಪಡಿಸಿ ಉಳಿದ ಎಲ್ಲಕ್ಕೂ ಇವತ್ತಿಗೂ ಕನ್ನಡದಲ್ಲೇ ಸಹಿ ಹಾಕ್ತೀನಿ ಎಂದರು.

ಬೇರೆ ಧರ್ಮ ಮತ್ತು ಇತರೆ ಭಾಷೆಗಳ ಬಗ್ಗೆ ಸಹಿಷ್ಣತೆ ಇರಬೇಕು. ನಮ್ಮ ಭಾಷೆ ಬಗ್ಗೆ ಅಭಿಮಾನ ಹೆಚ್ಚಾಗಿರಬೇಕು. ತಾಯಿ ಭಾಷೆ, ತಾಯಿ ನೆಲದ ಬಗ್ಗೆ ಅಭಿಮಾನ ಬೆಳೆಸಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದರು.

ಸಾ.ರಾ.ಗೋವಿಂದು ಅವರು ರಾಜ್ ಕುಮಾರ್ ಸಂಘದ ಅಧ್ಯಕ್ಷರಾಗಿ ಕನ್ನಡ ಪರವಾದ ಹೋರಾಟಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ. ಇವರ ಹೋರಾಟದ ಫಲವಾಗಿ ಕನ್ನಡ ಚಿತ್ರರಂಗದ ಅಡಿಪಾಯ ಗಟ್ಟಿ ಆಯಿತು ಎಂದು ಶ್ಲಾಘಿಸಿದರು.

ಹಿರಿಯ ಸಾಹಿತಿ ಹಂಪನಾ ಅವರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಗೋ.ರು.ಚನ್ನಬಸಪ್ಪ, ನಾಡೋಜ ಬರಗೂರು ರಾಮಚಂದ್ರಪ್ಪ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು, ವಿಧಾನಸಭೆ ಮುಖ್ಯ ಸಚೇತಕ ಅಶೋಕ್ ಪಟ್ಟಣ್, ಹಿರಿಯ ಪತ್ರಕರ್ತರಾದ ವೆಂಕಟೇಶ್ ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

ಇಂದು ರಾಷ್ಟ್ರೀಯ ಮತದಾರರ ದಿನ ಜ.25

# ಚುನಾವಣೆ ಎಂಬ ಪ್ರಜಾಪ್ರಭುತ್ವದ ಮಹಾಯಜ್ಞ

ವಿಶ್ವದ ಅತಿ ದೊಡ್ಡ ಪ್ರಜಾತಂತ್ರ ರಾಷ್ಟ್ರವಾದ ಭಾರತದಲ್ಲಿ ಇದೀಗ ಮತ್ತೊಂದು ಬಾರಿ ಚುನಾವಣೆ ಎಂಬ ಪ್ರಜಾಪ್ರಭುತ್ವದ ಮಹಾಯಜ್ಞ ಪ್ರಾರಂಭವಾಗಿದೆ. ಭಾರತ ಒಂದು ಸಾಂವಿಧಾನಿಕ ರಾಷ್ಟ್ರವಾಗಿದ್ದು ಇಲ್ಲಿ ಗಣತಂತ್ರ ವ್ಯವಸ್ಥೆಯು ಜಾರಿಯಲ್ಲಿದೆ. 29 ರಾಜ್ಯಗಳ 550ಕ್ಕೂ ಹೆಚ್ಚು ಲೋಕಸಭಾ ಸೀಟುಗಳು ಮತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ 224 ವಿಧಾನಸಭಾ ಸೀಟುಗಳು ಮತ್ತು 28 ಲೋಕಸಭಾ ಸೀಟುಗಳನ್ನು ಹೊಂದಿರುವ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ಪ್ರಜಾಪ್ರತಿನಿಧಿಗಳ ಆಯ್ಕೆ ನಡೆಯುತ್ತದೆ. ವಿವಿಧ ರಾಷ್ಟ್ರೀಯ ಪಕ್ಷಗಳು ತಮ್ಮ ಪಕ್ಷದ ಪ್ರಣಾಳಿಕೆಗಳೊಂದಿಗೆ ಜನರ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುವ ಪಣತೊಟ್ಟು ಚುನಾವಣೆಯ ಅಖಾಡಕ್ಕೆ ಇಳಿಯುತ್ತವೆ.

ಗ್ರಾಮ ಪಂಚಾಯತಿ, ಜಿಲ್ಲಾ ಪಂಚಾಯತಿ, ಪುರಸಭೆ, ನಗರ ಸಭೆ, ಮಹಾನಗರಪಾಲಿಕೆ ವಿಧಾನಸಭಾ ಸದಸ್ಯರು ಮೆಂಬರ್ ಆಫ್ ಲೆಜಿಸ್ಲೇಟಿವ್ ಅಸೆಂಬ್ಲಿ (ಮೇಲ್ಮನೆ ಮತ್ತು ಕೆಳಮನೆ ಸದಸ್ಯರು) ಮೆಂಬರ್ ಆಫ್ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರು ರಾಜ್ಯದಲ್ಲಿ ಆಡಳಿತದ ಭಾಗವಾಗಿ ಚುನಾಯಿಸಲ್ಪಟ್ಟರೆ ಲೋಕಸಭೆಯಲ್ಲಿ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರಾಗಿ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗುತ್ತದೆ. ಪದವೀಧರ ಕ್ಷೇತ್ರ, ಶಿಕ್ಷಕರ ಕ್ಷೇತ್ರ ಎಂದು ವಿವಿಧ ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ. ಮೇಲ್ಮನೆ ಸದಸ್ಯರು ಮತ್ತು ಕೇಂದ್ರದಲ್ಲಿ ರಾಜ್ಯಸಭಾ ಸದಸ್ಯರು ವಿವಿಧ ರಂಗಗಳಲ್ಲಿ ಸಾಧನೆ ಮಾಡಿದ ಜನರಿಗಾಗಿಯೇ ಕೆಲವು ಸೀಟುಗಳನ್ನು ಹೊಂದಿವೆ.

ಇದೆಲ್ಲಕ್ಕೂ ಮುಖ್ಯವಾದದ್ದು ನಮ್ಮ ಸಂವಿಧಾನದಲ್ಲಿ ಸರ್ವ ಜನರಿಗೂ ಸಮಾನವಾಗಿ ಕಲ್ಪಿಸಲ್ಪಟ್ಟ ಮತದಾನ ಪ್ರಕ್ರಿಯೆ. ಪ್ರಜೆಗಳಿಂದ, ಪ್ರಜೆಗಳಿಗಾಗಿ ಮತ್ತು ಪ್ರಜೆಗಳಿಗೋಸ್ಕರ ಎಂಬ ಧ್ಯೇಯ ವಾಕ್ಯವನ್ನು ಹೊಂದಿರುವ ನಮ್ಮ ಭಾರತ ದೇಶದಲ್ಲಿ ವಿವಿಧ ಹಂತಗಳಲ್ಲಿ ಪ್ರಜೆಗಳೇ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುತ್ತಾರೆ. ಹೀಗೆ ಅತಿ ಹೆಚ್ಚು ಸಂಖ್ಯೆಯಲ್ಲಿ ಚುನಾಯಿಸಲ್ಪಟ್ಟ ಪಕ್ಷವು ಅಧಿಕಾರಕ್ಕೆ ಬಂದು ಅದಕ್ಕಿಂತ ಕಡಿಮೆ ಸೀಟುಗಳನ್ನು ಗಳಿಸಿದ ಪಕ್ಷವು ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸುತ್ತವೆ. ಆಡಳಿತ ಪಕ್ಷವು ರಾಜ್ಯದ ಅಧಿಕಾರ ವರ್ಗದ ಸಹಯೋಗದೊಂದಿಗೆ ಆಡಳಿತಾತ್ಮಕ ನಿರ್ಣಯಗಳನ್ನು ಕೈಗೊಂಡರೆ ವಿರೋಧ ಪಕ್ಷವು ಕಾವಲು ನಾಯಿಗಳ ರೀತಿಯಲ್ಲಿ ಸರ್ಕಾರದ ಆಡಳಿತವನ್ನು ವಿಮರ್ಶೆ ಮಾಡುವ, ಟೀಕಿಸುವ ಮತ್ತು ಸರ್ಕಾರದ ಆಡಳಿತ ವಿರೋಧಿ ಧೋರಣೆಗಳ ವಿರುದ್ಧ ಅಹವಾಲು ಸಲ್ಲಿಸುವ ಕಾರ್ಯ ನಿರ್ವಹಿ ಸುತ್ತದೆ. ಹೀಗೆ ಒಂದಕ್ಕೊಂದು ಪೂರಕವಾಗಿ ಆಡಳಿತ ಮತ್ತು ವಿರೋಧಪಕ್ಷಗಳು ದೇಶದ, ರಾಜ್ಯದ ಅಭಿವೃದ್ಧಿ ಗೆ ತಮ್ಮ ಕಾಣಿಕೆಯನ್ನು ಸಲ್ಲಿಸುತ್ತವೆ.

ಇದು ಚುನಾವಣೆಯ ಮತ್ತು ಸರ್ಕಾರದ ಕುರಿತ ಮಾತಾದರೆ ಮತದಾನ ಎಂಬುದು ಪ್ರಜೆಗಳಿಗಿರುವ ಅತ್ಯಂತ ಮಹತ್ವದ ಹಕ್ಕು ಮತ್ತು ಕರ್ತವ್ಯವೂ ಹೌದು. ಅದರಲ್ಲೂ ತನಗೆ ಸೂಕ್ತವೆನಿಸಿದ ವ್ಯಕ್ತಿಯನ್ನು ಯಾವುದೇ ತಂಟೆ ತಕರಾರುಗಳಿಲ್ಲದೆ ಗೌಪ್ಯ ಮತದಾನದ ಮೂಲಕ ಆಯ್ಕೆ ಮಾಡುವ ಹಕ್ಕು, ಮತದಾರರಿಗೆ ಇದೆ. ಮತದಾನವು ಪ್ರಜಾಪ್ರತಿನಿಧಿ ಸರ್ಕಾರದ ಆಧಾರ ಸ್ತಂಭ.

ತನಗೆ ಸೂಕ್ತವೆನಿಸಿದ, ಮೆಚ್ಚುಗೆಯಾದ ನಾಯಕತ್ವವನ್ನು ಆಡಳಿತಕ್ಕೆ ತರುವಲ್ಲಿ ಮತದಾನ ಪ್ರಮುಖ ಪಾತ್ರ ವಹಿಸುತ್ತದೆ. ಮತದಾನವು ಪ್ರಜಾ ಸಮ್ಮತಿಯ ಹಕ್ಕನ್ನು ಪ್ರತಿಪಾದಿಸುತ್ತದೆ ಮತ್ತು ಸರ್ಕಾರ ರಚಿಸುವಲ್ಲಿ ನ್ಯಾಯಬದ್ಧ ನಿರ್ಣಯವನ್ನು ಮಂಡಿಸುತ್ತದೆ. ನಿಯಮಿತವಾಗಿ ನಿಗದಿತ ಸಮಯದಲ್ಲಿ ಚುನಾವಣೆಗಳು ನಡೆದರೆ ಆ ಸರ್ಕಾರವನ್ನು ನ್ಯಾಯಯುತ ಸರ್ಕಾರ ಎಂದು ಕರೆಯಬಹುದು.

**ಮತ ಚಲಾವಣೆಯು**

* ಸರ್ಕಾರದ ಆಡಳಿತಾತ್ಮಕ ಸಫಲತೆ ಮತ್ತು ವಿಫಲತೆಯನ್ನು, ಸರ್ಕಾರದ ನೀತಿ ನಿಯಮಾವಳಿಗಳಿಂದ ಉಂಟಾಗುವ ಸಾಧಕ ಬಾಧಕಗಳನ್ನು ಮೌಲ್ಯಮಾಪನ ಮಾಡುವ ಮಹತ್ತರ ಜವಾಬ್ದಾರಿಯಾಗಿದೆ.
* ಮತದಾನವು ರಾಷ್ಟ್ರದ ಭವಿಷ್ಯವನ್ನು ನಿರ್ಧರಿಸಲು ಅವಕಾಶ ನೀಡುತ್ತದೆ.
* ಮತದಾನದ ಮೂಲಕ ಸೂಕ್ತ ವ್ಯಕ್ತಿಯನ್ನು ಆರಿಸುವ ಮೂಲಕ ಆಡಳಿತಾತ್ಮಕ ಜವಾಬ್ದಾರಿಯನ್ನು ಸುಸೂತ್ರವಾಗಿ ಚುನಾಯಿತ ಪಕ್ಷಕ್ಕೆ ವರ್ಗಾಯಿಸಲು ಅನುಕೂಲವಾಗುತ್ತದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ವಿದ್ಯುನ್ಮಾನ ಮತ ಯಂತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಿರುವ ಉಮೇದುವಾರರನ್ನು ಪಕ್ಕದಲ್ಲಿಯೇ ಇರುವ ಕೆಂಪು ಗುಂಡಿಯನ್ನು ಒತ್ತುವ ಮೂಲಕ ನಮ್ಮ ಮತವನ್ನು ಚಲಾಯಿಸ ಬಹುದು. ಮತದಾರರು ತನಗೆ ಸೂಕ್ತವೆನಿಸಿದ ವ್ಯಕ್ತಿಯನ್ನು ಚುನಾಯಿಸುವ ಇಲ್ಲವೇ ಯಾರನ್ನೂ ಚುನಾಯಿಸದೆ ಇರುವ (ನೋಟ... ನನ್ ಆಫ್ ದ ಅಬೋವ) ಅಧಿಕಾರವನ್ನು ಹೊಂದಿರುತ್ತಾರೆ.



ಎಲ್ಲರಿಗೂ ಮತದಾನದ ಹಕ್ಕನ್ನು ಕೊಡುವುದರ ಕುರಿತು ಅಂಬೇಡ್ಕರ್ ಮತ್ತು ಗಾಂಧಿಯವರ ಮಧ್ಯದಲ್ಲಿ ಭಿನ್ನಾಭಿಪ್ರಾಯ ಇತ್ತು. ಅಂಬೇಡ್ಕರ್ ಎಲ್ಲರಿಗೂ ತಮ್ಮ ನಾಯಕನನ್ನು ಚುನಾಯಿಸುವ ಹಕ್ಕು ದೊರೆಯಲಿ ಎಂದು ವಾದಿಸಿದರೆ ಅಶಿಕ್ಷಿತ ಜನರಿಂದ ಈ ಹಕ್ಕಿನ ಉಲ್ಲಂಘನೆಯಾಗುವುದು ಎಂಬುದು ಗಾಂಧಿಯವರ ವಾದವಾಗಿತ್ತು. ಕೊನೆಗೂ ಅಂಬೇಡ್ಕರ್ ಅವರ ವಾದಕ್ಕೆ ಮನ್ನಣೆ ದೊರೆತು ಭಾರತ ದೇಶದ ಪ್ರತಿಯೊಬ್ಬ ಪ್ರಜೆಗೂ ಸೂಕ್ತ ವಯಸ್ಸಿನಲ್ಲಿ ಮತದಾನ ಮಾಡುವ ಹಕ್ಕು ದೊರೆತಿತ್ತು.

ಆದರೆ ಇಂದು ಮತದಾನ ಕುರಿತಾದ ಜನರ ಉಪೇಕ್ಷಿತ ಭಾವವನ್ನು ಕಂಡಾಗ ಗಾಂಧಿಯವರ ವಾದ ಸರಿಯಾಗಿತ್ತು ಎಂಬ ಭಾವ ಮನದಲ್ಲಿ ಕ್ಷಣ ಕಾಲ ಮೂಡಿ ಮರೆಯಾಗುತ್ತದೆ. ವಿದ್ಯಾವಂತರು, ಸುಶಿಕ್ಷಿತರು ಎಂದು ನಾವು ಕರೆಯುವ ಸೋ ಕಾಲ್ಡ್ ನಾಗರಿಕರು ಮತಗಟ್ಟೆಗೆ ಬಂದು ತಮ್ಮ ಹಕ್ಕನ್ನು ಚಲಾಯಿಸುವುದಿಲ್ಲ. ನಾವು ಹಾಕವ ಒಂದು ಮತದಿಂದ ದೇಶದ ಭವಿಷ್ಯವೇನು ಬದಲಾಗದು ಎಂಬ ಉಪೇಕ್ಷೆ, ಅಧಿಕಾರ ದೊರೆತ ನಂತರ ಬದಲಾಗುವ ರಾಜಕಾರಣಿಗಳ ಗೋಸುಂಬೆತನ ಚುನಾವಣಾ ಪ್ರಕ್ರಿಯೆಯ ಕುರಿತಾದ ತಪ್ಪು ಸಂದೇಶಗಳು, ಅಧಿಕಾರದ ಲಾಲಸೆಗಾಗಿ ಹಣ, ಹೆಂಡ ಮತ್ತು ಹೆಣ್ಣು ಮಕ್ಕಳಿಗೆ ಸೀರೆ ಬಟ್ಟೆಗಳ ಆಮಿಷ ಒಡ್ಡುವ ರಾಜಕಾರಣಿಗಳು, ಶತಾಯಗತಾಯ ಅಧಿಕಾರ ದೊರೆಯಲೇಬೇಕೆಂಬ ಹಪಹಪಿತನ ಅಸಹ್ಯ ಭಾವನೆಯನ್ನು ಉಂಟುಮಾಡುತ್ತದೆ. ತಿಳುವಳಿಕೆ ಇಲ್ಲದ ಮತ್ತು ಮತದಾನದ ಮಹತ್ವ ಅರಿಯದ ಜನ ಒಂದು ದಿನದ ಮೋಜಿಗಾಗಿ ತಮ್ಮ ವೋಟನ್ನು ಮಾರಿಕೊಳ್ಳುತ್ತಾರೆ. ಇನ್ನು ಪ್ರಜ್ಞಾವಂತ ಜನ ಮತ ಹಾಕಲು ಸಿಗುವ ಒಂದು ರಜೆಯ ಜೊತೆ ಇನ್ನೊಂದೆರಡು ರಜೆಗಳನ್ನು ಕ್ರೋಢೀಕರಿಸಿ ಪ್ರವಾಸ ಮತ್ತು ರಜೆಯ ಮಜಾ ಅನುಭವಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಯಾರು ರಾಜ್ಯವಾಳಿದರೆ ತಮಗೆ ಬರುವ ಕಿರೀಟವಾದರೂ ಏನು ಎಂದು ಹೇಳುವ ಈ ಜನ ಮುಂದೆ ಲೋಕಭಿರಾಮವಾಗಿ ಮಾತನಾಡುವಾಗ ಈ ದೇಶದ ವ್ಯವಸ್ಥೆಯನ್ನು, ರಸ್ತೆಯ ದುರವಸ್ಥೆಗಳನ್ನು ಅನಾರೋಗ್ಯಕರ ರಾಜಕೀಯ ಬೆಳವಣಿಗೆಗಳನ್ನು ದೂಷಿಸುತ್ತಾರೆ.

ಎಲ್ಲವನ್ನು ಮನಗೊಂಡು 2011ರಲ್ಲಿ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸಚಿವ ಸಂಪುಟ ಸಭೆ ನಡೆದು ರಾಷ್ಟ್ರೀಯ ಮತದಾನ ದಿನಾಚರಣೆಯನ್ನು ಆಚರಿಸುವ ಮಹತ್ವದ ನಿರ್ಧಾರವನ್ನು ಕೈಗೊಂಡು ದೇಶದ ಅಭಿವೃದ್ಧಿಗಾಗಿ ಯುವಜನರ ಗುಣಾತ್ಮಕ ಭಾಗವಹಿಸುವಿಕೆಯ ಮೂಲಕ 18 ವರ್ಷಕ್ಕೂ ಮೇಲ್ಪಟ್ಟ ಯುವ ಮತದಾರರನ್ನು ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಉತ್ತೇಜಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಪ್ರತಿ ವರ್ಷ ಜನವರಿ 25ನೇ ದಿನಾಂಕವನ್ನು ರಾಷ್ಟ್ರೀಯ ಮತದಾರರ ದಿನಾಚರಣೆ ಎಂದು ಆಚರಿಸುತ್ತಿದ್ದು ಈ ಆಚರಣೆಯ ಹಿಂದಿನ ಮುಖ್ಯ ಉದ್ದೇಶ ಹೊಸ ಮತದಾರರನ್ನು ಪ್ರೋತ್ಸಾಹಿಸುವುದು, ದಾಖಲಾತಿಯನ್ನು ಗರಿಷ್ಠ ಗೊಳಿಸುವುದು ಮತ್ತು ಮತದಾನ ಮಾಡುವುದು ತಮ್ಮ ಮೂಲಭೂತ ಹಕ್ಕು ಎಂಬ ಮೌಲ್ಯದ ಅರಿವನ್ನು ಮೂಡಿಸುವುದು. ಮತದಾನ ಮಾಡುವ ಮೂಲಕ ಓರ್ವ ವ್ಯಕ್ತಿ ದೇಶದ ಭವಿಷ್ಯದ ಹಿನ್ನೆಲೆ ಹೇಗೆ ಪ್ರಭಾವ ಬೀರಬಹುದು ಎಂಬುದನ್ನು ಒತ್ತಿ ಹೇಳುವ ಮೂಲಕ ನಾವು ಮತದಾನ ಮಾಡುವ ಮೂಲಕ ಆಯ್ಕೆ ಮಾಡಿಕೊಳ್ಳುವ ವ್ಯಕ್ತಿ ದೇಶದ ಸಮಗ್ರ ಅಭಿವೃದ್ಧಿಗೆ ಹೇಗೆ ಕಾರಣನಾಗುತ್ತಾನೆ ಎಂಬುದರ ಕುರಿತು ಯುವ ಜನರಲ್ಲಿ ಯಾವುದೇ ಹಿಂಜರಿಕೆ ಇಲ್ಲದೆ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಮ್ಮ ಹಕ್ಕನ್ನು ಚಲಾಯಿಸಲು ಪ್ರೋತ್ಸಾಹಿಸುತ್ತದೆ.

ಚುನಾವಣಾ ಪ್ರಕ್ರಿಯೆಗಳು ಮತ್ತು ಕಾರ್ಯವಿಧಾನಗಳಲ್ಲಿನ ಶ್ರೇಷ್ಠತೆ, ಪ್ರಾವೀಣ್ಯತೆ ಮತ್ತು ನಾವೀನ್ಯತೆಗಾಗಿ ರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಈ ಪ್ರಶಸ್ತಿಗಳು ಚುನಾವಣಾ ಯಂತ್ರಗಳು, ಸರ್ಕಾರಿ ಇಲಾಖೆ, ಅರೆ ಸರ್ಕಾರಿ ಕಚೇರಿಗಳು, ಸಂಘ ಸಂಸ್ಥೆಗಳು ಮತ್ತು ಮಾಧ್ಯಮಗಳ ಕೊಡುಗೆಯನ್ನು ಗುರುತಿಸಿ ಪ್ರಶಸ್ತಿ ನೀಡುವ ಮೂಲಕ ಅವರಲ್ಲಿನ ಮತದಾನ ಜಾಗೃತಿಯ ಸಬಲೀಕರಣಕ್ಕೆ ಮತ್ತಷ್ಟು ಪ್ರೋತ್ಸಾಹ ನೀಡುತ್ತದೆ.

ಇಲ್ಲಿ ಪ್ರಜ್ಞಾವಂತ ನಾಗರಿಕರು ಗಮನಿಸಬೇಕಾದದ್ದು ಇಷ್ಟು..... ಸರಿಯಾದ, ಸೂಕ್ತವೆನಿಸಿದ ವ್ಯಕ್ತಿಯನ್ನು ಆಯ್ಕೆ ಮಾಡದೇ ಇದ್ದಾಗ ಸೂಕ್ತವಲ್ಲದ ವ್ಯಕ್ತಿಗೆ ಅವಕಾಶ ದೊರೆತು ಅವಘಡಗಳಿಗೆ ಕಾರಣವಾಗುತ್ತದೆ. ಕಾರಣ ಮತ ಚಲಾಯಿಸುವ ನಮ್ಮ ಪರಮೋಚ್ಚ ಅಧಿಕಾರವನ್ನು ಚಲಾಯಿಸಿ ದೇಶದ ಭವ್ಯ ಭವಿಷ್ಯಕ್ಕೆ ತಮ್ಮ ಕಾಣಿಕೆಯನ್ನು ಸಲ್ಲಿಸಲಿ. ಮತ ಚಲಾಯಿಸುವ ಮೂಲಕ ತಮ್ಮ ಹಕ್ಕು ಮತ್ತು ಕರ್ತವ್ಯವನ್ನು ನಿರ್ವಹಿಸಲೇಬೇಕಾದ ಅನಿವಾರ್ಯತೆಯನ್ನು ಮನಗಾಣಿಸಲು ವಿವಿಧ ಸರಕಾರಿ ಕಚೇರಿಗಳ ನೌಕರರು ಸಂಘ ಸಂಸ್ಥೆಗಳು ಮತದಾನದ ಹಕ್ಕಿನ ಅರಿವನ್ನು ಮನವರಿಕೆ ಮಾಡಿಕೊಡಲು ಮೆರವಣಿಗೆಗಳನ್ನು ಜಾಥಾಗಳನ್ನು, ಮಕ್ಕಳ ಶಿಬಿರಗಳಲ್ಲಿ ಪಾಲಕರಿಗೆ ವಿಶೇಷವಾಗಿ ಹಮ್ಮಿಕೊಳ್ಳುತ್ತಿದ್ದಾರೆ.

ಜಗತ್ತಿನ ಅತಿ ದೊಡ್ಡ ಪ್ರಜಾತಂತ್ರ ರಾಷ್ಟ್ರವಾದ ಭಾರತದ ಚುನಾವಣಾ ಸಮರದಲ್ಲಿ ನಮ್ಮ ಹಕ್ಕನ್ನು ಚಲಾಯಿಸಿ ಸೂಕ್ತ ವ್ಯಕ್ತಿಯ ಆಯ್ಕೆ ಮಾಡುವುದು ನಮ್ಮದೇ ಹೊಣೆ, ಕರ್ತವ್ಯವೂ ಕೂಡ ಎಂಬ ಪ್ರಜ್ಞೆಯನ್ನು ತುಂಬಲಾಗುತ್ತದೆ.

ಭಾರತ ದೇಶವೆಂಬ ಬೃಹತ್ ಸಾಗರವನ್ನು ದಾಟುವ ಚುನಾವಣೆ ಎಂಬ ಮಹಾ ಹಡಗನ್ನು ನಡೆಸುವ ನಾವಿಕನ ಆಯ್ಕೆ ಕೇವಲ ನಮ್ಮದು ಮಾತ್ರ ....ಸೂಕ್ತ ವ್ಯಕ್ತಿಯ ಆಯ್ಕೆ ಮಾಡಿ ಪ್ರಜಾತಂತ್ರವನ್ನು ಉಳಿಸೋಣ... ನಾಳಿನ ಭವಿಷ್ಯವನ್ನು ಉನ್ನತವಾಗಿ ಬರೆಯೋಣ ಎಂಬ ಆಶಯದೊಂದಿಗೆ

# ರಾಷ್ಟ್ರೀಯ ಮತದಾರರ ದಿನಾಚರಣೆ : ಇಲಾಖಾಧಿಕಾರಿಗಳಿಗೆ ಪ್ರತಿಜ್ಞಾವಿಧಿ ಬೋಧನೆ

■ **ಹಂಪಿ ಟೈಮ್ಸ್ ಕೊಪ್ಪಳ/ ಹೊಸಪೇಟೆ**

ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು.

ಜಿಲ್ಲಾಧಿಕಾರಿಗಳುಹಾಗೂಜಿಲ್ಲಾಚುನಾವಣಾಧಿಕಾರಿಗಳಾದ ನಲಿನ್ ಅತುಲ್ ಅವರು ವಿವಿಧ ಇಲಾಖೆಗಳ ಅಧಿಕಾರಿ ಸಿಬ್ಬಂದಿಗಳಿಗೆ ಮತದಾರರ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರೇಷ್ಮಾ ಹಾನಗಲ್, ಜಿಲ್ಲಾ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಕೃಷ್ಣಮೂರ್ತಿ ದೇಸಾಯಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ್, ಚುನಾವಣಾ ತಹಶಿಲ್ದಾರರ ರವಿ ವಸ್ತ್ರದ್ ಸೇರಿದಂತೆ ವಿವಿಧ ಇಲಾಖೆಗಳ ಹಾಗೂ ಜಿಲ್ಲಾಧಿಕಾರಿ ಕಚೇರಿಯ ಇತರೆ ಅಧಿಕಾರಿ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.





ಕನ್ನಡ ವಿಶ್ವವಿದ್ಯಾಲಯದಲ್ಲಿ ಸರ್ಕಾರದ ಆದೇಶದಂತೆ ರಾಷ್ಟ್ರೀಯ ಮತದಾರರ ದಿನ ಪ್ರತಿಜ್ಞಾವಿಧಿ ಬೋಧಿಸುವ ಕಾರ್ಯಕ್ರಮವನ್ನು ಕ್ರಿಯಾಶಕ್ತಿ ಕಟ್ಟಡದ ಸಿಂಡಿಕೇಟ್ ಸಭಾಂಗಣದಲ್ಲಿ ಶುಕ್ರವಾರ ಜರುಗಿತು.
ಕುಲಸಚಿವ ಡಾ.ವಿಜಯ್ ಪೂಣಚ್ಚ ತಂಬಂಡ ಬೋಧಿಸಿದರು. ವಿಶ್ವವಿದ್ಯಾಲಯದ ಅಧಿಕಾರಿಗಳು, ಮುಖ್ಯಸ್ಥರು, ಅಧ್ಯಾಪಕರು, ಬೋಧಕೇತರ ಸಿಬ್ಬಂದಿಗಳು ಭಾಗವಹಿಸಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಬಾಹ್ಯಾಕಾಶದಲ್ಲಿ ಸತ್ತರೆ...

ವಿಶ್ವದ ಜನಸಂಖ್ಯೆ ನಾಗಾಲೋಟದಲ್ಲಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಅದಕ್ಕಿಂತಲೂ ವೇಗದಲ್ಲಿ ಚಲಿಸುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಸದುಪಯೋಗದಿಂದ ಜನರಿಗೆ ಭವಿಷ್ಯದ ಜನವಸತಿ ಸೌಲಭ್ಯಕ್ಕಾಗಿ ಭೂಮಿಯಾಚೆ ಜನವಸತಿ ತಾಣಗಳಿಗಾಗಿ ಶೋಧ ನಡೆಯುತ್ತಲೇ ಇದೆ. ಇದರ ಭಾಗವಾಗಿ ಈಗಾಗಲೇ ಮಂಗಳನತ್ತ ನಮ್ಮ ಪಯಣದ ಪ್ರಯತ್ನಗಳು ಸಾಗಿದೆ. ಇದರ ಜೊತೆಜೊತೆಗೆ ಬಾಹ್ಯಾಕಾಶ ನಿಲ್ದಾಣಗಳಲ್ಲಿ ಕೆಲವು ದಿನಗಳ ಮಟ್ಟಿಗಾದರೂ ವಾಸಿಸುವ ಪ್ರಯತ್ನದಲ್ಲಿ ಯಶಸ್ಸು ಕಂಡಿದ್ದೇವೆ. ಮುಂದಿನ ದಿನಗಳಲ್ಲಿ ಈ ಪ್ರಯತ್ನಗಳು ಇನ್ನಷ್ಟು ಹೆಚ್ಚುವ ಸಾಧ್ಯತೆಗಳಿವೆ. ಇದರ ಜೊತೆಗೆ ಅಪಾಯಗಳ ಪ್ರಮಾಣಗಳೂ ಹೆಚ್ಚುವ ಸಾಧ್ಯತೆಗಳನ್ನು ನಾವು ತಳ್ಳಿಹಾಕುವಂತಿಲ್ಲ. ಅವಕಾಶಗಳು ಹೆಚ್ಚಿದಂತೆಲ್ಲಾ ಅಪಾಯಗಳು ಸಹ ಹೆಚ್ಚುತ್ತಿರುವುದು ಕಳವಳಕಾರಿಯಾಗಿದೆ. ಅನ್ಯ ಗ್ರಹಗಳಿಗೆ ತೆರಳುವ ನಮ್ಮ ಪ್ರಯಾಣದಲ್ಲಿ ಅಂತರಿಕ್ಷದಲ್ಲಿ ನಮ್ಮ ಸಾವು ಉಂಟಾದರೆ ಏನಾಗುತ್ತದೆ? ಎಂಬುದೇ ಇಂದಿನ ಚರ್ಚೆಯ ಮೂಲ.

ಅಂತರಿಕ್ಷ ಎಲ್ಲಿದೆ? ಭೂವಾತಾವರಣದಾಚೆ ಇರುವ ಪ್ರದೇಶವನ್ನು ಅಂತರಿಕ್ಷ ಎಂದು ಹೇಳುತ್ತೇವೆ. ಆದರೆ ಭೂಮಿಯಿಂದ ಅದು ಎಷ್ಟು ದೂರದಲ್ಲಿದೆ ಎಂದು ನಿರ್ದಿಷ್ಟವಾಗಿ ಹೇಳಲಾಗದು. ಭೂಮಿಯಿಂದ 160 ಕಿ.ಮೀ ಎತ್ತರದಿಂದ ಅಂತರಿಕ್ಷ ಪ್ರಾರಂಭವಾಗುತ್ತದೆ ಎಂದು ಕೆಲ ವಿಜ್ಞಾನಿಗಳು ಹೇಳುತ್ತಾರೆ. ಹೀಗಾಗಿ ಸೂರ್ಯ, ಚಂದ್ರ, ಸೇರಿದಂತೆ ನಮ್ಮ ಸೌರವ್ಯೂಹದ ಇನ್ನಿತರೇ ಗ್ರಹಗಳೆಲ್ಲವೂ ಅಂತರಿಕ್ಷದಲ್ಲಿವೆ ಎಂಬುದು ತಿಳಿಯುತ್ತದೆ. ಅಂತರಿಕ್ಷಕ್ಕೆ ತೆರಳುವ ಪ್ರಯಾಣಿಕರನ್ನು ಗಗನಯಾತ್ರಿಗಳು ಅಥವಾ ವ್ಯೋಮಯಾನಿಗಳೆಂದು, ಇವರನ್ನು ಕರೆದುಕೊಂಡು ಹೋಗುವ ವಾಹನಗಳನ್ನು ಅಂತರಿಕ್ಷ ನೌಕೆಗಳೆಂದು ಕರೆಯುತ್ತಾರೆ. 1957ರಿಂದ ಅಂತರಿಕ್ಷ ಯಾನ ಪ್ರಾರಂಭವಾಯಿತು. 1961ರಲ್ಲಿ ರಷ್ಯಾದ ಗಗನಯಾತ್ರಿ ಯೂರಿಗಗಾರಿನ್ ಅಂತರಿಕ್ಷ ಯಾನ ಮಾಡಿದ ಮೊದಲ ಮಾನವ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾನೆ. ಈತ 1ಗಂಟೆ 48 ನಿಮಿಷಗಳಲ್ಲಿ ಒಂದು ಬಾರಿ ಭೂಪ್ರದಕ್ಷಿಣೆ ಮಾಡಿ ಸುರಕ್ಷಿತವಾಗಿ ಭೂಮಿಗೆ ಹಿಂತಿರುಗಿದ. ಅಲ್ಲಿಂದ ಇಲ್ಲಿವರೆಗೂ ಇನ್ನೂರಕ್ಕೂ ಹೆಚ್ಚು ಜನ ಅಂತರಿಕ್ಷ ಯಾತ್ರೆ ಮಾಡಿದ್ದಾರೆ. 20ನೇ ಶತಮಾನದ ಇಂಟ್ರಾಗ್ಯಾಲಾಕ್ಟಿಕ್ ಪ್ರಯಾಣದ ಆರಂಭದಿಂದ ಇಂದಿನವರೆಗೆ 19 ಜನರು ಅಂತರಿಕ್ಷದಲ್ಲಿ ಸಾವನ್ನಪ್ಪಿದ್ದಾರೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ಅಂತರಿಕ್ಷದಲ್ಲಿ ಸಾವು ಏಕೆ?

ಪ್ರತಿ ಗಗನಯಾನಿಯು ಅಂತರಿಕ್ಷ ಯಾನದೊಂದಿಗೆ ತನ್ನ ಸಾವನ್ನೂ ಕೂಡಾಹೊತ್ತೊಯ್ಯುತ್ತಾನೆ ಎಂಬ ಮಾತಿದೆ. ಏಕೆಂದರೆ ಯಾವ ಕ್ಷಣದಲ್ಲಿಯಾದರೂ ಅವರ ಸಾವು ಸಂಭವಿಸಬಹುದು ಅಲ್ಲವೇ?. ಸಾಮಾನ್ಯವಾಗಿ ಅಂತರಿಕ್ಷಕ್ಕೆ ತೆರಳು ಪ್ರತಿಯೊಬ್ಬ ಗಗನಯಾತ್ರಿಯೂ ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳುವಂತಹ ಮನೋಸ್ಥಿತಿ ಹಾಗೂ ಅದಕ್ಕೆ ಪೂರಕವಾದ ಉಡುಪು ಹಾಗೂ ಅಗತ್ಯ ರಕ್ಷಣಾ ಕ್ರಮಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸಿಕೊಂಡು ಪ್ರಯಾಣ ಆರಂಭಿಸುತ್ತಾರೆ. ಇಷ್ಟೆಲ್ಲಾ ರಕ್ಷಣಾ ಕ್ರಮಗಳನ್ನು ಕೈಗೊಂಡಿದ್ದರೂ ಅಂತರಿಕ್ಷದಲ್ಲಿ ಸಾವು ಸಂಭವಿಸುವುದೇಕೆ? ಎಂಬ ಪ್ರಶ್ನೆ ಸಹಜ. ಅಂತರಿಕ್ಷ ಪ್ರಯಾಣ ಗ್ರಹಗಳ ನಡುವಿನ ಗುರುತ್ವ ಹಾಗೂ ತೇಲುವಿಕೆಯ ವೇಗವನ್ನು ಅವಲಂಬಿಸಿರುತ್ತದೆ. ಅಂತರಿಕ್ಷದಲ್ಲಿ ನಡೆಯುವ ಅನೀರೀಕ್ಷಿತ ವಿದ್ಯಾಮಾನಗಳು ರಕ್ಷಣಾತ್ಮಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತವೆ. ಇದರಿಂದಾಗಿ ಸಾವು ಸಂಭವಿಸುತ್ತವೆ.

ಅಂತರಿಕ್ಷದಲ್ಲಿ ಸಾವು ಸಂಭವಿಸಿದರೆ ಏನಾಗುತ್ತದೆ?

ಅಂತರಿಕ್ಷದಲ್ಲಿ ಸಾವು ಸಂಭವಿಸಿದ 10 ಸೆಕೆಂಡ್‌ಗಳಲ್ಲಿ ಅವರ ಚರ್ಮ ಮತ್ತು ರಕ್ತದಲ್ಲಿನ ನೀರು ಆವಿಯಾಗುತ್ತದೆ. ಇದರಿಂದ ಅವರ ದೇಹವು ಗಾಳಿಯಿಂದ ತುಂಬಿಕೊಳ್ಳುತ್ತದೆ. ಚರ್ಮದ ಬಳಿ ಇರುವ ಕರಗಿದ ಸಾರಜನಕವು ದೇಹದ ಮೇಲೆ ಸಾವಿರಾರು ಗುಳ್ಳೆಗಳನ್ನು ರೂಪಿಸುತ್ತದೆ. ಈ ಗುಳ್ಳೆಗಳು ಕೇವಲ 15 ಸೆಕೆಂಡ್‌ಗಳಲ್ಲಿಯೇ ಗಾತ್ರದಲ್ಲಿ ದ್ವಿಗುಣವಾಗು ತ್ತವೆ. ಆಗ ಇದು ಬಲೂನಿನ ಅಂಗಡಿಯಂತೆ ತೋರುತ್ತದೆ.

ಅಂತರಿಕ್ಷದಲ್ಲಿ ಸಾವು ಸಂಭವಿಸಿದ 30 ಸೆಕೆಂಡುಗಳಲ್ಲಿ ಅವರ ಶ್ವಾಸಕೋಶಗಳು ಹಾಳಾಗುತ್ತವೆ ಮತ್ತು ಅವು ಪಾರ್ಶ್ವವಾಯುವಿಗೆ ಒಳಗಾಗುತ್ತವೆ. ದೇಹವು ಹೆಪ್ಪುಗಟ್ಟುವ ಮೊದಲೇ ಉಸಿರುಗಟ್ಟುವಿಕೆ ಅಥವಾ ವಿಭಜನೆಯಿಂದ ಸಾವು ಸಂಭವಿಸಿರುತ್ತದೆ. ಏಕೆಂದರೆ ದೇಹದ ಶಾಖವು ನಿಧಾನವಾಗಿ ನಿರ್ವಾತದಲ್ಲಿ ಸೇರಿಕೊಳ್ಳುತ್ತದೆ.

ಅಂತರಿಕ್ಷದಲ್ಲಿ ಸಾವು ಸಂಭವಿಸಿದರೆ ಇನ್ನೊಂದು ಪ್ರಶ್ನೆ ಉಂಟಾಗುತ್ತದೆ. ಅದೇನೆಂದರೆ ಸತ್ತ ವ್ಯಕ್ತಿಯ ಹೆಣವನ್ನು ಏನು ಮಾಡುತ್ತಾರೆ? ಭೂಮಿಗೆ ವಾಪಾಸು ತರುತ್ತಾರೋ? ಅಥವಾ ಅಲ್ಲಿಯೇ ಅಂತ್ಯಕ್ರಿಯೆ ಮಾಡುತ್ತಾರೋ? ಎಂಬ ಗೊಂದಲ ಉಂಟಾಗುತ್ತದೆ. ಅಂತರಿಕ್ಷದಲ್ಲಿನ ಶೂನ್ಯ ಗುರುತ್ವದಲ್ಲಿ ಅಂತ್ಯಕ್ರಿಯೆ ಮಾಡಲು ಸಾಧ್ಯವೇ? ಎಂಬ ಪ್ರಶ್ನೆಯೂ ಕಾಡುತ್ತದೆ.

ಅಂತರಿಕ್ಷದಲ್ಲಿ ಸತ್ತ ಹೆಣದ ನಿರ್ವಹಣೆ ಬಗ್ಗೆ ನಾಸಾ ಯಾವುದೇ ಅಧಿಕೃತ ನೀತಿಯನ್ನು ಪ್ರಕಟಿಸಿಲ್ಲ. ಐ.ಎಸ್.ಎಸ್. ತರಬೇತುದಾರರಾದ ಹ್ಯಾಡ್‌ಫೀಲ್ಡ್ ಅವರ ಪ್ರಕಾರ ಸತ್ತ ದೇಹವನ್ನು ಜೈವಿಕ ಅಪಾಯಗಳು ಬರಲಾರದಂತೆ ನಿರ್ವಹಿಸಬೇಕಾಗುತ್ತದೆ. ಅದಕ್ಕಾಗಿ ಅವುಗಳನ್ನು ಶೇಖರಣಾ ಆಯ್ಕೆಗಳ ಬಗ್ಗೆ ಸಂಶೋಧನೆಗಳು ಆಗಬೇಕಿದೆ. ಸದ್ಯಕ್ಕೆ ಇರುವ ಆಯ್ಕೆ ಎಂದರೆ ದೇಹವನ್ನು ಅಂತರಿಕ್ಷ ಕಸದ ಮಾದರಿಯಲ್ಲಿ ಸಂಗ್ರಹಿಸಲಾಗುತ್ತದೆ. ದೇಹವನ್ನು ಒತ್ತಡಕ್ಕೊಳಗಾದ ಸೂಟ್‌ನಲ್ಲಿ ಇಡುವುದೊಂದೇ ಸದ್ಯದ ಪರಿಹಾರ. ಹೀಗೆ ಇಡುವುದೂ ಸಹ ಅಪಾಯಕರವಾಗಿದೆ. ಏಕೆಂದರೆ ಮೃತ ದೇಹಗಳು ಅಪಾಯಕಾರಿಗಳಲ್ಲವೇ? ಅದರಿಂದ ಬ್ಯಾಕ್ಟೀರಿಯಾಗಳ ಸೋಂಕು ಇನ್ನಿತರರಿಗೆ ಹರಡುತ್ತದೆ.


2005ರಲ್ಲಿ ಸ್ವೀಡಿಶ್ ಕಂಪನಿಯೊಂದು ಮೃತ ದೇಹಗಳ ಸಂಸ್ಕರಣೆ ವ್ಯವಸ್ಥೆಯನ್ನು ಪ್ರಸ್ತಾಪಿಸಿತ್ತು. ಇದರ ಪ್ರಕಾರ ದೇಹವನ್ನು ಸಣ್ಣ ಸಣ್ಣ ಹೆಪ್ಪುಗಟ್ಟಿದ ಅಂಗಾಂಶಗಳಾಗಿ ವಿಭಜಿಸುವುದು. ಇದು ಸಂಪೂರ್ಣವಾಗಿ ಶವಸಂಸ್ಕಾರದ ರೀತಿಯಲ್ಲಿಯೇ ಇರುತ್ತದೆ ಎಂದು ಹೇಳಿತ್ತು. ಇದು ತುಂಬಾ ಕಡಿಮೆ ಜಾಗವನ್ನು ತೆಗೆದುಕೊಳ್ಳುತ್ತದೆ ಮತ್ತು ಜೈವಿಕ ಅಪಾಯಗಳನ್ನು ನಿವಾರಿಸುತ್ತದೆ. ಜೊತೆಗೆ ಭುಮಿಗೆ ಸುಲಭವಾಗಿ ಸಾಗಿಸಲು ಅನುಕೂಲವಾಗುತ್ತದೆ ಎಂದೂ ಹೇಳಿತ್ತು. ಹಡಗಿನಲ್ಲಿ ಘನೀಕರಿಸುವಿಕೆಗಾಗಿ ದ್ರವ ಸಾರಜನಕ ಬಳಸುವಂತೆ ಇಲ್ಲಿಯೂ ದ್ರವ ಸಾರಜನಕ ಬಳಸಿ ಹೆಣವನ್ನು ಕೆಡದಂತೆ ಸಂರಕ್ಷಿಸುವದೇ ಇದರ ಪ್ರಸ್ತಾವನೆಯಾಗಿತ್ತು. ಅಂದರೆ ದ್ರವ ಸಾರಜನಕದ ಮಂಜುಗಡ್ಡೆಯೊಂದಿಗೆ ಸತ್ತ ದೇಹವನ್ನು ಸಂಗ್ರಹಿಸಲಾಗುತ್ತದೆ. ಸರಳವಾಗಿ ಹೇಳುವುದಾದರೆ ಇದನ್ನು ಶೀತ ನಿರ್ವಾತದಲ್ಲಿ ಸಂಗ್ರಹಿಸಲಾಗುತ್ತದೆ.

ಸಾಮಾನ್ಯವಾಗಿ ಗಗನಯಾತ್ರಿಗಳು ಯಾವಾಗಲೂ ಸ್ಪೇಸ್ ಸೂಟ್ ಮತ್ತು ಸ್ಪೇಸ್ ಹೆಲ್ಮೆಟ್ ಧರಿಸಿರುತ್ತಾರೆ. ಇವುಗಳು ಇಲ್ಲದಿದ್ದರೂ ಅಲ್ಲಿನ ವಾತಾವರಣಕ್ಕೆ ಒಗ್ಗಿಕೊಳ್ಳಲಾಗುವುದೇ ಇಲ್ಲ. ಅಂತರಿಕ್ಷದಲ್ಲಿ +1200 ಸೆಲ್ಸಿಯಸ್‌ಗೂ ಅಧಿಕ ಹಾಗೂ –1000 ಸೆಲ್ಸಿಯಸ್‌ಗೂ ಕಡಿಮೆ ತಾಪಮಾನ ಇರುತ್ತದೆ. ಹೀಗಾಗಿ ಸೂರ್ಯನ ಕಾಸ್ಮಿಕ್ ಕಿರಣಗಳು ಅಥವಾ ಮಂಜಿನ ವಾತಾವರಣಕ್ಕೆ ಒಗ್ಗಿಕೊಳ್ಳದೇ ಸಾವು ಸಂಭವಿಸಬಹುದು.




ಅಂತರಿಕ್ಷದಲ್ಲಿ ಸಾವು ಏಕೆ ಮತ್ತು ಹೇಗೆ ಸಂಭವಿಸುತ್ತದೆ ಎಂಬುದನ್ನು ತೋರಿಸಲು ಅನೇಕ ಟಾಲಿವುಡ್ ಮೂವಿಗಳು ಬಂದಿವೆ. ಅವುಗಳಲ್ಲಿ ಸ್ಟೇನ್ಲಿ ಕೂಬ್ರಿಕ್ ನಿರ್ದೇಶನದಲ್ಲಿ 1968ರಲ್ಲಿ ತೆರೆಗೆ ಬಂದ "2001:ಎ ಸ್ಪೇಸ್ ಓಡೆಸ್ಸಿ" ಎನ್ನುವ ಕುತೂಹಲಭರಿತ ಸಿನಿಮಾ ನಮ್ಮ ಪ್ರಸ್ತುತ ಚರ್ಚೆಗೆ ಉತ್ತರವನ್ನು ನೀಡುತ್ತದೆ. ಅದರಲ್ಲಿನ ನಾಯಕ ಡೇವಿಡ್ ಬೌಮನ್ ಅಂತರಿಕ್ಷ ನೌಕೆಯಲ್ಲಿ ಚಲಿಸುವಾಗ ಹೆಲ್ಮೆಟ್ ಇಲ್ಲದೆ ತಲೆಯನ್ನು ಪಾಡ್‌ನಿಂದ ಏರ್‌ಲಾಕ್‌ಗೆ ಹೊರಹಾಕುತ್ತಾನೆ. ಆಗ ಆತನಿಗೆ ಜೀವ ಹೋಗುವ ಅನುಭವವಾಗುತ್ತದೆ. ನೌಕೆ ಅವನ ನಿಯಂತ್ರಣ ಕಳೆದುಕೊಳ್ಳುತ್ತದೆ ಮತ್ತು ಅಘಘಾತ ಅನುಭವಿಸುವ ಹಂತ ತಲುಪುತ್ತದೆ. ತಕ್ಷಣವೇ ಕೇವಲ 30 ಸೆಕೆಂಡುಗಳಲ್ಲಿ ತನ್ನ ತಲೆಯನ್ನು ಒಳಗೆಳೆದುಕೊಂಡು ನಾಕೆಯನ್ನು ನಿಯಂತ್ರಿಸುತ್ತಾನೆ ಮತ್ತು ಅದರಲ್ಲಿನ ಎಲ್ಲರೂ ಬದುಕುಳಿಯಲು ಸಾಧ್ಯವಾಗುತ್ತದೆ. 2000ನೇ ಇಸ್ವಿಯಲ್ಲಿ ತೆರೆಕಂಡ ಬ್ರೇನ್ ಡಿ ಪಾಮಾ ನಿರ್ದೇಶನದ "ಮಿಶನ್ ಟು ಮಾರ್ಸ್" ಮೂವಿಯಲ್ಲಿ ಗಗನಯಾತ್ರಿಗಳ ಸೂಟ್ ಒತ್ತಡಕ್ಕೊಳಗಾಗಿ ಹಾನಿಯಾದರೆ ಏನಾಗಬಹುದು ಎಂಬುದನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ತೋರಿಸಲಾಗಿದೆ. 2012ರಲ್ಲಿ ತೆರೆಗೆ ಬಂದ ಲೆನ್ ವೈಸ್‌ಮ್ಯಾನ್ ನಿರ್ದೇಶನದ "ಟೋಟಲ್ ರೀಕಾಲ್" ಎಂಬ ಸಿನಿಮಾದಲ್ಲಿ ಗಗನಯಾತ್ರಿಗಳು ಅಂತರಿಕ್ಷ ಸತ್ತರೆ ದೇಹ ಸ್ಫೋಟಗೊಳ್ಳುತ್ತದೆ ಎಂಬಂತೆ ತೋರಿಸಲಾಗಿದೆ. ಇದು ತಪ್ಪುಕಲ್ಪನೆಯಾಗಿದೆ.

ಹೀಗೆ ಅನೇಕ ದುಷ್ಟಾಂತಗಳ ಮೂಲಕ ಅಂತರಿಕ್ಷದಲ್ಲಿ ಸಾವು ಸಂಭವಿಸಿದರೆ ಏನಾಗುತ್ತದೆ ಎಂಬುದನ್ನು ಊಹಿಸಬಹುದು. ವಾಸ್ತವವಾಗಿ ಅಂತರಿಕ್ಷದಲ್ಲಿ ಅಂತಹ ಯಾವುದೇ ಸಾವುಗಳು ಸಂಭವಿಸಿಲ್ಲ. ಮೇಲೆ ಉಲ್ಲೇಖಿಸಿದಂತೆ 19 ಗಗನಯಾತ್ರಿಗಳು ಅಂತರಿಕ್ಷದಲ್ಲಿಯೇ ಸತ್ತರು ನಿಜ. ಆದರೆ ಅವರೆಲ್ಲರೂ ಅಂತರಿಕ್ಷ ನೌಕೆಯಲ್ಲಿ ಅಘಘಾತಗಳಾಗಿ ಸತ್ತರು. ಬಹುತೇಕ ಎಲ್ಲಾ ದೇಹಗಳು ಅಲ್ಲಿಯೇ ಬೆಂಕಿಗೆ ಆಹುತಿಯಾದವು ಎಂಬುದು ನೋವಿನ ಸಂಗತಿ. ಅದರಲ್ಲಿ 2003ರಲ್ಲಿ ಸಂಭವಿಸಿದ ಕೊಲಂಬಿಯಾ ಅಂತರಿಕ್ಷ ನೌಕಾ ದುರಂತದಲ್ಲಿ ಭಾರತಿಐ ಸಂಜಾತೆ "ಕಲ್ಪನಾ ಚಾವ್ಲಾ" ಅವರೂ ಒಬ್ಬರು ಎಂಬುದು ಇನ್ನೂ ನೋವಿನ ಸಂಗತಿ. ಇಡಿ ಜಗತ್ತಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವವನ್ನು ಸಾರಲು ಹೊರಟ ಗಗನಯಾತ್ರಿಗಳಿಗೆ ಇಂತಹ ಸಾವು ಬಾರದರಲಿ ಎಂದು ಆಶಿಸುತ್ತ ಇಂದಿನ ಚರ್ಚೆಯನ್ನು ಮುಕ್ತಾಯಗೊಳಿಸೋಣ.



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 24–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1619.55 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 11801 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 60.077 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1588.75 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 451 ಕ್ಯುಸೆಕ್ |
| ಸಾಮರ್ಥ್ಯ | 10.019 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

25–01–2025 – ಶನಿವಾರ

| | |
|---|---|
| ತಿಥಿ | ಏಕಾದಶಿ |
| ಪಕ್ಷ | ಕೃಷ್ಣ |
| ನಕ್ಷತ್ರ | ಜ್ಯೇಷ್ಠ |
| ಯೋಗ | ಧ್ರುವ |
| ಕರಣ | ಭವ |
| ಸೂರ್ಯೋದಯ | 07:10:21 |
| ಸೂರ್ಯಾಸ್ತ | 18:08:28 |
| ರಾಹು ಕಾಲ | 09:55–11:17 |
| ಯಮಘಂಡ ಕಾಲ | 14:02–12:24 |
| ಗುಳಿಕ ಕಾಲ | 07:10–08:33 |

ಹಂಪಿ ಟೈಮ್ಸ್
ಸುದ್ದಿ–ಜಾಹೀರಾತಿಗಾಗಿ
ಸಂಪರ್ಕಿಸಿ: 9448633038
ಕಚೇರಿ ವಿಳಾಸ: ವಾಲ್ಮೀಕಿ ಸರ್ಕಲ್ ಹತ್ತಿರ, ಬಂಬೂ ಬಜಾರ್, ಹೊಸಪೇಟೆ–583201 ವಿಜಯನಗರ ಜಿಲ್ಲೆ

# ಬಾಲ್ಯ ವಿವಾಹಗಳನ್ನ ತಡೆಗಟ್ಟಿ ಹೆಣ್ಣುಮಗು ರಕ್ಷಿಸಿ

## ಪ್ರಸೂತಿ ತಜ್ಞ ಡಾ.ನಾಗರಾಜ ಹೇಳಿಕೆ। ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ



■ ಹಂಪಿ ಟೈಮ್ಸ್ ಕೂಡ್ಲಿಗಿ

ಹೆಣ್ಣು ಮಕ್ಕಳು ಪ್ರತಿ ಮನೆಯ ದೊಡ್ಡ ಆಸ್ತಿ, ಹೆಣ್ಣು ಮಗುವಿನಿಂದ ಮನೆ, ಕುಟುಂಬ ಬೆಳೆಯುತ್ತದೆ ಎಂದು ಸಾರ್ವಜನಿಕ ಆಸ್ಪತ್ರೆಯ ಪ್ರಸೂತಿ ತಜ್ಞ ಡಾ.ನಾಗರಾಜ ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಶುಕ್ರವಾರ ತಾಲೂಕು ಸಾರ್ವಜನಿಕ ಆಸ್ಪತ್ರೆ ವತಿಯಿಂದ ಏರ್ಪಡಿಸಿದ್ದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯಲ್ಲಿ ಮಾತನಾಡಿದರು. ಸಮಾಜದಲ್ಲಿ ಹೆಣ್ಣನ್ನು ಸಮಾನವಾಗಿ ಗೌರವಿಸಿ ಅವರ ಹಕ್ಕುಗಳನ್ನು ಜಾಗೃತಿ ಗೊಳಿಸಬೇಕು. ಹೆಣ್ಣುಮಕ್ಕಳ ಶೋಷಣೆಗಳ ವಿರುದ್ಧ ಪ್ರತಿಯೊಬ್ಬರು ಜಾಗೃತಿ ವಹಿಸಬೇಕಾಗಿದೆ. ಅಲ್ಲದೆ ಹೆಣ್ಣು ಭ್ರೂಣ ಹತ್ಯೆಗಳನ್ನು ನಿಷೇಧಿಸಬೇಕು, ಬಾಲ್ಯ ವಿವಾಹಗಳನ್ನು ತಡೆಗಟ್ಟುವ ಕೆಲಸ ಪ್ರತಿಯೊಬ್ಬರಿಂದಲೂ ಆಗಬೇಕಿದೆ ಎಂದ ಅವರು, ಹೆಣ್ಣುಮಕ್ಕಳು ಸಹ ತಮ್ಮ ಆರೋಗ್ಯದ ಬಗ್ಗೆ ಕಾಳಜಿವಹಿಸಿ ಸದೃಡರಾಗ ಬೇಕು. ಪ್ರಸ್ತುತ ದಿನಗಳಲ್ಲಿ ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ಹೆಣ್ಣಿಗೆ ಅವಕಾಶಗಳು ಮಾಡಿಕೊಡಬೇಕು ಎಂದು ತಿಳಿಸಿದರು.

ಸಾರ್ವಜನಿಕ ಆಸ್ಪತ್ರೆಯ ವೈದ್ಯೆ ಡಾ. ರೇಣುಕಾ ಮಾತನಾಡಿ, ಹದಿಹರಯದವರು ಕಿಶೋರಿಯರು ರಕ್ತಹೀನತೆಗೆ ಒಳಗಾಗುತ್ತಿದ್ದಾರೆ ಆದ್ದರಿಂದ ಅವರ ಆರೋಗ್ಯ ಸದೃಢವಾಗಿ ಕಾಪಾಡಿಕೊಳ್ಳುವುದರ ಮೂಲಕ ಸಮಾಜದ ಉನ್ನತಿಕರಣಕ್ಕೆ ಹೆಣ್ಣು ತನ್ನ ಸ್ಥಾನಮಾನವನ್ನು ಸುಭದ್ರಗೊಳಿಸಿಕ್ಕೊಳ್ಳಬೇಕಿದೆ. ಆ ನಿಟ್ಟಿನಲ್ಲಿ ಸಮಾಜದಲ್ಲಿ ಹೆಣ್ಣು ತಾನೂ ಅಬಲೆಯಲ್ಲ ಸಭಲೆ ಎಂದು ಎಲ್ಲಾ ಕ್ಷೇತ್ರದಲ್ಲಿ ತನ್ನ ಛಾಪನ್ನು ಮೂಡಿಸಿ ಯಶಸ್ವಿಯಾಗಬೇಕು ಎಂದು ತಿಳಿಸಿದರು.

ತಾಲೂಕು ಸಾರ್ವಜನಿಕ ಆಸ್ಪತ್ರೆ ಮೂಳೆ ತಜ್ಞ ಡಾ. ರವಿಕುಮಾರ್, ದಂತ ತಜ್ಞೆ ಡಾ. ರಮ್ಯ, ವೈದ್ಯರಾದ ಸುಮಂಗಳ, ಅರ್ಪಿತ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಜಗದೀಶ, ಆರ್ ಕೆಎಸ್ ಕೆ ಆಪ್ತ ಸಮಾಲೋಚಕ ಓಬಣ್ಣ, ಎನ್ ಸಿಡಿ ಆಪ್ತ ಸಮಾಲೋಚಕಿ ನಾಗರತ್ನ, ಲಸಿಕೆ ಶೂಷ್ರೂಷ ಅಧಿಕಾರಿ ಜರೀನಾ ಸೇರಿದಂತೆ ಪ್ಯಾರ ಮೆಡಿಕಲ್ ವಿಧ್ಯಾರ್ಥಿಗಳ ಇದ್ದರು.

# ಒಪಿಎಸ್ ಜಾರಿಗೊಳಿಸದಿದ್ರೆ ಹೋರಾಟಕ್ಕೂ ಸಿದ್ದ

## ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಧ್ಯಕ್ಷ ಸಿ.ಎಸ್ ಷಡಾಕ್ಷರಿ ಎಚ್ಚರಿಕೆ

■ ಹಂಪಿ ಟೈಮ್ಸ್ ಕೊಟ್ಟೂರು

ಕೇಂದ್ರ ಸರ್ಕಾರದ 8ನೇ ವೇತನ ಆಯೋಗಕ್ಕೆ ಸರಿಸಮನಾಗಿ ಮತ್ತು ರಾಜ್ಯದ ಒಪಿಎಸ್ ಜಾರಿ ಹಾಗೂ ಆರೋಗ್ಯ ಸಂಜೀವಿನಿ ಯೋಜನೆ ಇನ್ನು ಒಂದೂವರೆ ವರ್ಷದೊಳಗೆ ಅನುಷ್ಠಾನಗೊಳ್ಳದಿದ್ದರೆ ನನ್ನ ನೌಕರಿ ಹೋದ್ರು ಪರವಾಗಿಲ್ಲ ಯಾವ ಹೋರಾಟಕ್ಕೂ ಸಿದ್ದ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್ ಷಡಾಕ್ಷರಿ ಗುಡುಗಿದರು.

ಪಟ್ಟಣದಲ್ಲಿ ಮರುಳಸಿದ್ದೇಶ್ವರ ಸಭಾಂಗಣ ದಲ್ಲಿ ಗುರುವಾರ ಸಂಜೆ ಸರ್ಕಾರಿ ನೌಕರರ ಸಂಘ ಆಯೋಜಿಸಿದ ರಾಜ್ಯಧ್ಯಕ್ಷರಿಗೆ ಸನ್ಮಾನ ಹಾಗೂ ಕೊಟ್ಟೂರು ಸರ್ಕಾರಿ ನೌಕರರ ಪದಗ್ರಹಣ ಸಮಾರಂಭದಲ್ಲಿ ವಾಗ್ದಾನ ಮಾಡಿದರು. ರಾಜ್ಯದಲ್ಲಿ 2.70 ಲಕ್ಷ, ಶೇ.45 ರಷ್ಟು ಹುದ್ದೆಗಳು ಖಾಲಿ ಇವೆ, ಒಬ್ಬೊಬ್ಬ ನೌಕರ ಎರಡು ಮೂರು ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುವ ಅನಿವಾರ್ಯತೆ ಎದುರಾಗಿದೆ ಇದರಿಂದ, ಸರ್ಕಾರಿ ನೌಕರರು ತೀವ್ರ ಒತ್ತಡದಲ್ಲಿದ್ದಾರೆ. ನೆಮ್ಮದಿ ಇಲ್ಲದಂತಾಗಿದೆ. ಶೀಘ್ರ ಸರ್ಕಾರ ಖಾಲಿ



ಹುದ್ದೆಗಳನ್ನು ಭರ್ತಿ ಮಾಡಿದರೆ ಆಡಳಿತ ಸುಗಮವಾಗಿ ನಡೆಯಲಿದೆ ಎಂದು ನೌಕರರ ಸ್ಥಿತಿಯನ್ನು, ವಾಸ್ತವಾಂಶವನ್ನು ತಿಳಿಸಿದರು. ಕರೋನ ಸಂದರ್ಭದಲ್ಲಿ ನಮ್ಮ ನೌಕರರು ಜೀವವನ್ನು ಒತ್ತೆ ಇಟ್ಟು ಸೇವೆ ಸಲ್ಲಿಸಿದ್ದ ಮನೋಸ್ಥೈರ್ಯವನ್ನು ಯಾರೂ ಮರೆಯುವಂತಿಲ್ಲ. ಪ್ರಕೃತಿ ವಿಕೋಪ ಹಾಗೂ ಕೋವಿಡ್ ನಂತಹ ಸಂಕಷ್ಟದ ಸನ್ನಿವೇಶದಲ್ಲಿ ಸರ್ಕಾರಕ್ಕೆ 1 ಸಾವಿರ ಕೋಟಿ ಹಾಗೂ ಸಾಹಿತ್ಯ ಸಮ್ಮೇಳನಕ್ಕೆ 3 ಕೋಟಿ ರೂ. ದೇಣಿಗೆ ನಮ್ಮ ನೌಕರರು ಕೊಟ್ಟಿದ್ದಾರೆ ಇದು ನಮ್ಮ ಹೆಮ್ಮೆ ಎಂದರು.

ರಾಜ್ಯದಲ್ಲಿ ಅಸ್ಥಿತ್ವಕ್ಕೆ ಬಂದಿರುವ ನೂತನ ಜಿಲ್ಲೆಗಳ 57 ತಾಲೂಕುಗಳು ಸಂಪೂರ್ಣವಾಗಿ ಸರ್ಕಾರಿ ಕಚೇರಿಗಳು ಬಾಗಿಲು ತೆರೆದಿಲ್ಲ. ಈ ಕುರಿತು ಮುಖ್ಯಮಂತ್ರಿಗಳಲ್ಲಿ ಪ್ರಸ್ತಾಪಿಸಿರುವುದಲ್ಲದೆ ಒತ್ತಾಯ ಮಾಡಿರುವುದಾಗಿ ತಿಳಿಸಿದರು.

ಮಹಿಳಾ ನೌಕರರಿಗೆ 6 ತಿಂಗಳು ಪ್ರಸೂತಿ ರಜೆ ಜತೆಗೆ ಸಂಪೂರ್ಣ ಸಂಬಳ ಕೊಡುವ ಸರ್ಕಾರದ ತೀರ್ಮಾನಕ್ಕೆ, ರಾಜ್ಯ ನೌಕರರ ಸಂಘದ ಶ್ರಮ ಇದೆ ಎಂದರು.

ಸಂಘದ ನಿಕಟಪೂರ್ವ ಅಧ್ಯಕ್ಷ ಜಗದೀಶ ಪ್ರಾಸ್ತಾವಿಕವಾಗಿ ಮಾತನಾಡಿ ನೂತನ ಅಧ್ಯಕ್ಷ ಯೋಗಶ್ವರ ದಿನ್ನೆಗೆ ಅಧಿಕಾರ ಹಸ್ತಾಂತರಿಸಿದರು. ನೂತನ ಅಧ್ಯಕ್ಷ ಯೋಗೀಶ್ವರ ದಿನ್ನಿ. ರಾಜ್ಯಾಧ್ಯಕ್ಷ ಷಡಕ್ಷರಿ ಅವರಿಗೆ ಇಲ್ಲಿ ಸರ್ಕಾರಿ ನೌಕರರು ಕೂರಲು ಸ್ಥಳವಿಲ್ಲ. ನೌಕರರ ಭವನ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡುವಂತೆ ಕೋರಿದರು.

ವೇದಿಕೆಯಲ್ಲಿ ತಹಶಿಲ್ದಾರ ಅಮರೇಶ್.ಜಿ.ಕೆ ಹಾಗೂ ತಾಪಂ ಇಒ ಆನಂದ ಕುಮಾರ್ .ಬಿ. ರಾಜ್ಯ, ಜಿಲ್ಲಾ, ತಾಲೂಕು ಪದಾಧಿಕಾರಿಗಳಿದ್ದರು. ಗುರು ಬಸವರಾಜ್, ಜಗದೀಶ ನಿರ್ವಹಿಸಿದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI

ಈಗಿಂದಲೇ ಪುನರ್‌ಮನನ ಮಾಡಿ

ಪರೀಕ್ಷೆಗೆ ನಾವು ಸಿದ್ಧ 55 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ನಿನ್ನ ಏಳಿಗೆ ನಿನಗೆ ಖುಷಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ** **ಮಾದರಿ ಪ್ರಶ್ನೆ- ಪತ್ರಿಕೆ** **ಹಿಂದಿ**

दसवीं कक्षा प्रथम संकलनात्मक परीक्षा : 2024 - 25

अंक : 80 हिन्दी समय : 3 घंटे

---

**ಮುಂದುವರೆದ ಭಾಗ -----**

**VI 36. गध्यांश को ध्यानपूर्वक पढकर निम्नलिखित प्रश्नों के उत्तर लिखिए : 4 x 1 = 4**

साहित्य दो प्रकार में दिखाई देता है । शिष्ट साहित्य और जनपद साहित्य । ज्ञानी और शास्त्रज्ञ जिस साहित्य का सृजन करते हैं उसे शिष्ट साहित्य कहा जाता है । शिष्ट साहित्य लिखित होता है। जनपद साहित्य अलिखित होता है । इसकी रक्षा मौखिक परंपरा से होती है । ज्यादातर जनपद साहित्य ग्रामों में जन्म लेते है ।

क) साहित्य के दो प्रकार कौन- कौन से हैं ?
ख) शिष्ट साहित्य का सृजन कैसे होता है ?
ग) जनपद साहित्य क्या है ?
घ) जनपद साहित्य का जन्म कहाँ हुआ ?

---

**VIII. दिए गए संकेत बिंदुओं के आधार पर 12 – 15 वाक्यों में किसी एक विषय के बारे में निबंध लिखिए : 1 x 4 = 4**

37 क ) **इंटरनेट :** अर्थ , लाभ , हानी, उपसंहार

**अर्थ** : इंटरनेट अनगिनत कंप्यूटरों के कई अंतर्जालों का एक दूसरे से संबंध स्थापित करने का जाल है ।

इंटरनेट एक तरह से विश्वव्यापी कंप्यूटरों का अंतर्जाल है । जिसकी वजह से पूरे विश्व का विस्तार एक गाँव का - सा छोटा हो गया है ।

**लाभ :**

* इंटरनेट द्वारा घर बैठे-बैठे खरीदारी कर सकते हैं ।
* कोई भी बिल भर सकते हैं ।
* इससे दुकान जाने और लाइन में घंटों खडे रहने का समय बच सकता है ।
* इंटरनेट – बैकिंग द्वारा दुनिया की किसी भी जगह पर चाहे जितनी भी रकम भेजी जा सकती है ।
* इंटरनेट के द्वारा पल भर में कोई भी विचार हो, स्तिर चित्र हो, वीडियो चित्र हो, दुनिया के किसी भी कोने में भेज सकते हैं ।
* इंटरनेट के मदद से ' वीडियो कान्फरेन्स ' कर सकते है ।
* इंटरनेट की सहायता से बेरोजगारी मिठा सकते है । इंटरनेट की वजह से सोशल नेटवर्किंग हो रहा है ।
* इंटरनेट की मदद से ई – गवर्नेन्स लागू किया गया है ।
* चिकित्सा, कृषि, अंतरिक्ष ज्ञान, विज्ञान, शिक्षा आदि क्षेत्रों में इंटरनेट अपना कमाल दिखाया है ।
* देश की रक्षादलों की कार्यवाही में भी इंटरनेट का बहुत बडा योगदान है ।

**हानी :**

* इंटरनेट एक ओर वरदान है तो दूसरी ओर अभिशाप है ।
* इंटरनेट की वजह से पैरसी, बैंकिंग फ्राड, हैकिंग आदी बढ रही है ।
* मुक्त वेब साइट, चैटिंग आदि से युवा पीढी ही नही बचे भी इंटरनेट कबंध बाहों के पाश में फँसे हुए है ।
* इससे वक्त का दुरुपयोग होता है ।
* बचें अनुपयुक्त और अनावश्यक जानकारी हासिल कर रहे है ।

**उपसंहार :** इंटरनेट से मानव की जीवनशली और सोच में क्रांतिकारी परिवर्तन हुआ है। बडे बूढों से लेकर छोटे बचों तक सब पर इंटरनेट का असर पडा है । आज इंटरनेट के बिना कोई भी काम नही हो सकती है । जीवन के हर क्षेत्र में इंटरनेट का बहुत बडा योगदान है । इंटरनेट एक ओर वरदान है तो दूसरी ओर अभिशाप है । इसलिए सब लोग इंटरनेट से सचेत रहना चाहिए ।

---

**IX . निम्नलिखित विषय के बारे में एक पत्र लिखिए : 1 x 5 = 5**

38 अपनी बहन की शादी के कारण दो दिन छुट्टी के लिए प्रधानाध्यापक जी के नाम पर पत्र लिखिए : **अथवा**

पढाई के बारे में सलाह देते हुए अपने भाई के नाम पर पत्र लिखिए ।

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ**, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

## ಮೈಕ್ರೋ ನ್ಯೂಸ್

### 76ನೇ ಗಣರಾಜ್ಯೋತ್ಸವ ದೇವಸ್ಥಾನಗಳಿಗೆ ವಿದ್ಯುತ್ ದೀಪಾಲಂಕಾರ

**ಹಂಪಿ ಟೈಮ್ಸ್ ಹೊಸಪೇಟೆ**

76 ನೇ ಗಣರಾಜ್ಯೋತ್ಸವ ದಿನಚಾರಣೆ ನಿಮಿತ್ತ ಹಿಂದೂ ಧಾರ್ಮಿಕ ದತ್ತಿಗಳ ಇಲಾಖೆಯಿಂದ, ಆಡಳಿತಾಧಿಕಾರಿ ಮತ್ತು ಕಾರ್ಯನಿರ್ವಾಹಣ ಅಧಿಕಾರಿಗಳು ಹಾಗೂ ಆಡಳಿತ ಮುಖ್ಯಸ್ಥರಿಗೆ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ದೇವಸ್ಥಾನಗಳಿಗೆ ಜ.25 ಮತ್ತು ಜ.26 ರಂದು ವಿದ್ಯುತ್ ದೀಪಾಲಂಕಾರ, ಹಾಗೂ ಜ.26 ರಂದು ವಿಶೇಷ ಪೂಜೆ, ಪ್ರಾರ್ಥನೆ ವ್ಯವಸ್ಥೆ ಮಾಡಬೇಕೆಂದು ಹಿಂದೂ ಧಾರ್ಮಿಕ ದತ್ತಿಗಳ ಇಲಾಖೆ ಸಹಾಯಕ ನಿರ್ದೇಶಕ ಹೆಚ್. ಗಂಗಾಧರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಆಸ್ತಿ ತೆರಿಗೆ, ನೀರಿನ ಶುಲ್ಕ ವಸೂಲಾತಿಗೆ ಡೇ-ನಲ್ಮ್ ಯೋಜನೆಯ ಸ್ವ- ಸಹಾಯ ಸಂಘದ ವರದಿಂದ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ಸಮರ್ಪಕವಾಗಿ ವಸೂಲಾತಿ ಮಾಡಲು ಅರ್ಹ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಿಂದ ಅರ್ಜಿ ಅಹ್ವಾನಿಸಲಾಗಿದೆ ಎಂದು ಮುಖ್ಯಾಧಿಕಾರಿ ಎಂ.ಖಾಜಾ ತಿಳಿಸಿದ್ದಾರೆ.

ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ಡೇ–ನಲ್ಮ್ ಅಭಿಯಾನದಡಿ ರಚಿಸಲಾಗಿರುವ ಅರ್ಹ ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ವಸೂಲಾತಿ, ಸಂಗ್ರಹಣೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಡೇ–ನಲ್ಮ್ ಗುಂಪುಗಳಲ್ಲಿನ ಸದಸ್ಯರು ಕನಿಷ್ಠ 7ನೇ ತರಗತಿಯವರೆಗೆ ಶಿಕ್ಷಣವನ್ನು ಹಾಗೂ ಎಲೆಕ್ಟ್ರಾನಿಕ್ಸ್ ಪರಿಕರಗಳನ್ನು ಬಳಸುವ ಸಾಮರ್ಥ್ಯವನ್ನು ಹೊಂದಿರಬೇಕು. ಆದ್ಯತೆ ಮೇರೆಗೆ ಹೆಚ್ಚಿನ ವಿದ್ಯಾಭ್ಯಾಸ ಪಡೆದಂತವರಿಗೆ ಆದ್ಯತೆ ನೀಡಲಾಗುವುದು. ಪಟ್ಟಣ ಪಂಚಾಯ್ತಿ ವ್ಯಾಪ್ತಿಯೊಳಗೆ ಬರುವ ಮಹಿಳಾ ಸ್ವಸಹಾಯ ಸಂಘದ ಸದಸ್ಯರುಗಳು ಫೆ.12 ರೊಳಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ಕಾರ್ಯಾಲಯದ ಡೇ–ನಲ್ಮ್ ಶಾಖೆಗೆ ಸಂಪರ್ಕಿಸುವುದು.

### ಜ.29 ರಂದು ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಪ್ರಗತಿ ಪರಿಶೀಲನಾ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲೆಯ ಎಲ್ಲಾ ಸಾರ್ವಜನಿಕ ಪ್ರದೇಶಗಳಲ್ಲಿ 'ಸಿಗರೇಟ್ ಮತ್ತು ಇತರೆ ತಂಬಾಕು ಉತ್ಪನ್ನಗಳ ಅಧಿನಿಯಮ(ಕೋಟ್ಪಾ)–2003' ರ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೆ ಕುರಿತಂತೆ ಚರ್ಚಿಸಲು ಜ.29 ರಂದು ಮಧ್ಯಾಹ್ನ 03.30 ಗಂಟೆಗೆ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಪ್ರಗತಿ ಪರಿಶೀಲನಾ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಅಧ್ಯಕ್ಷರೂ ಆಗಿರುವ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರು ತಿಳಿಸಿದ್ದಾರೆ.

### ಇಂದು ಕಂಪ್ಲಿಯಲ್ಲಿ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಕಂಪ್ಲಿ**



ಕಂಪ್ಲಿ ಜೆಸ್ಕಾಂ ವ್ಯಾಪ್ತಿಯ ಮೆಟ್ರಿ 110 ಕೆವಿ ಉಪ ಕೇಂದ್ರದಲ್ಲಿ ವಿದ್ಯುತ್ ನಿರ್ವಹಣೆ ಕಾರ್ಯ ಕೈಗೊಳ್ಳುತ್ತಿರುವುದರಿಂದ ಜ.25 ರಂದು ಬೆಳಿಗ್ಗೆ 09 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ಮೆಟ್ರಿ, ದೇವಲಾಪುರ,ಸುಗ್ಗೇನಹಳ್ಳಿ,ಹಂಪಾದೇವನಹಳ್ಳಿ ಗ್ರಾಮ ಪಂಚಾಯತಿಯ ಹಳ್ಳಿಗಳ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಹಾಗೂ ಮೆಟ್ರಿ ಉಪ ಕೇಂದ್ರಕ್ಕೆ ಸಂಬಂಧಿಸಿದ ಐಪಿ ಸೆಟ್ ಮಾರ್ಗಗಳಲ್ಲಿ ಬೆಳಿಗ್ಗೆ 3 ರಿಂದ 10 ಗಂಟೆಯವರೆಗೆ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ಜೆಸ್ಕಾಂ ಕಂಪ್ಲಿಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಡಿಸಿ ಎಂ.ಎಸ್.ದಿವಾಕರ ಹೇಳಿಕೆ | ಹೆಣ್ಣು ಮಕ್ಕಳಿಗಾಗಿ ಬೇಟಿ ಬಚಾವೋ, ಬೇಟಿ ಪಡಾವೋ ಯೋಜನೆ

# ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಸರ್ಕಾರದಿಂದ ಪ್ರೋತ್ಸಾಹವಿದೆ



**ಹಂಪಿ ಟೈಮ್ಸ್ ಹೊಸಪೇಟೆ**

ವಿದ್ಯಾರ್ಥಿನಿಯರು ಭವಿಷ್ಯದಲ್ಲಿ ಸ್ವಾವಲಂಬನೆ ಬದುಕು ಕಟ್ಟಿಕೊಳ್ಳಲು ಈಗ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸಲಹೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯೂಕೇಷನಲ್ ಟ್ರಸ್ಟ್ ಸಹಯೋಗದಲ್ಲಿ ಹೆಣ್ಣು ಮಕ್ಕಳ ರಾಷ್ಟ್ರೀಯ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಕ್ರವಾರ ಮಾತನಾಡಿದರು, ಕೇಂದ್ರ ಸರ್ಕಾರ ಹೆಣ್ಣು ಮಕ್ಕಳಿಗಾಗಿ 'ಬೇಟಿ ಬಚಾವೋ, ಬೇಟಿ ಪಡಾವೋ' ಯೋಜನೆಯನ್ನು ಅನುಷ್ಠಾನಗೊಳಿಸಿ ದಶಮಾನೋತ್ಸವ ಸಂಭ್ರಮ ಆಚರಿಸುತ್ತಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಣ್ಣುಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ, ರಕ್ಷಣೆ ನೀಡಲು ಅನೇಕ ಯೋಜನೆಗಳನ್ನು ಜಾರಿ ಮಾಡಿದ್ದು ಅವುಗಳನ್ನು ವಿದ್ಯಾರ್ಥಿನಿಯರು ಸಮರ್ಪಕವಾಗಿ ಸದ್ಬಳಕೆ ಮಾಡಿಕೊಳ್ಳಬೇಕು. ಸ್ವಾವಲಂಬಿಯಾಗಿ ಬದು ಕಲು ಶಿಕ್ಷಣ ಪೂರಕವಾಗಿದೆ. ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ನೀಡಿ ವಿದ್ಯಾವಂತರಾಗಿ, ಪ್ರಜ್ಞಾವಂತ ಪ್ರಜೆಗಳಾಗಿ ಪೋಷಕರಿಗೆ, ಕಲಿತ ಶಾಲೆಗೆ, ನಿಮ್ಮೂರುಗಳಿಗೆ ಕೀರ್ತಿ ತರುವಂತಹ ಕಾರ್ಯಕ್ಕೆ ಸಂಕಲ್ಪ ಮಾಡಬೇಕು ಎಂದರು.

ಇದೇ ವೇಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ದಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್‌ರವರ ತಾಯಿ ನಾಗರತ್ನಮ್ಮ, ಜಿಪಂ ಸಿಇಒ ನೊಂಗ್ಜಾಯ್ ಮೊಹಮ್ಮದ್ ಅಕ್ರಮ್ ಅಲಿ ಷಾ ಅವರ ತಾಯಿ ಸಫೀನಾ ಹೆಸರಿನಲ್ಲಿ ಸಸಿಗಳನ್ನು ನೆಡುವ ಮೂಲಕ ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆಗೆ ಚಾಲನೆ ನೀಡಿದರು.

ಬಳಿಕ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧನೆ, ಸಹಿ ಸಂಗ್ರಹ ಅಭಿಯಾನವನ್ನು ನಡೆಸಲಾಯಿತು. ಜಿಲ್ಲಾಧಿಕಾರಿ ಕಚೇರಿಯಿಂದ ಪ್ರಮುಖ ರಸ್ತೆಯಲ್ಲಿ ಪಥಸಂಚಲನ ನಡೆಸುವ ಮೂಲಕ ಜಾಗೃತಿ ಜಾಥಾ ನಡೆಸಲಾಯಿತು.

ಈ ವೇಳೆ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಲೀಂ ಪಾಷ, ಜಿಲ್ಲಾ ನಿರೂಪಣಾ ಅಧಿಕಾರಿ ಸುಭದ್ರಾ ದೇವಿ, ಸಿಡಿಪಿಒ ಸಿಂಧು ಅಂಗಡಿ, ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯೂಕೇಷನಲ್ ಟ್ರಸ್ಟ್ ಸಂಸ್ಥೆಯ ಅಧ್ಯಕ್ಷ ಯು.ಭೀಮರಾಜ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅಂಬುಜಾ, ಜಿಲ್ಲಾ ಮಿಷನ್ ಸಂಯೋಜಕ ಶಿವಣ್ಣ, ನೇತ್ರಾ ಹರ್ತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಕ್ಕಳ ರಕ್ಷಣಾಧಿಕಾರಿ ಗಂಗಾಧರ ಡೊಳ್ಳಿನ ಇತರರಿದ್ದರು.

# ಈಗ ಮಹಿಳಾ ಯುಗ ಸೌಲಭ್ಯ ಬಳಸಿಕೊಳ್ಳಿ

## ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿಕೆ | ಶಿಕ್ಷಣದಿಂದ ಸ್ವಾವಲಂಬಿಗಳಾಗಿ



**ಹಂಪಿ ಟೈಮ್ಸ್ ಕೊಪ್ಪಳ**

ಮಹಿಳೆಯರಿಗೆ ಬಹಳಷ್ಟು ಸೌಲಭ್ಯಗಳನ್ನು ನೀಡಲಾಗಿದ್ದು ಅವುಗಳ ಸದುಪಯೋಗ ಪಡೆದುಕೊಂಡು ತಾವೆಲ್ಲರೂ ಮುಂದೆ ಬರಬೇಕು. ಇಂದಿನ ಯುವ ಮಹಿಳಾ ಯುಗವಾಗಿದೆ ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರ ಶುಕ್ರವಾರ ಜಿಲ್ಲಾಡಳಿತ. ಜಿಲ್ಲಾ ಪಂಚಾಯತ್ ಕೊಪ್ಪಳ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಪೊಲೀಸ್ ಇಲಾಖೆ. ಶಾಲಾ– ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೊಪ್ಪಳ ಇವರ ಸಹಯೋಗದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲನಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಹಾಗೂ ಬೇಟಿ ಬಚಾವೋ ಬೇಟಿ ಪಡಾವೋ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರ ಸಬಲೀಕರಣಕ್ಕಾಗಿ ರಾಜ್ಯ ಸರ್ಕಾರ ಗೃಹ ಲಕ್ಷ್ಮೀ. ಶಕ್ತಿ ಯೋಜನೆಯಂತಹ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ ಇದರಿಂದ ತಮಗೆ ಬಹಳಷ್ಟು ಅನುಕೂಲವಾಗಿದೆ. ತಾವು ಬಸ್ಸಿನಲ್ಲಿ ಸ್ವತಂತ್ರವಾಗಿ ಎಲ್ಲಾ ಕಡೆ ಪ್ರಯಾಣ ಮಾಡುತ್ತಿದ್ದಿರಾ. ಮಹಿಳೆಯರು ಸ್ವತಂತ್ರವಾಗಿ ಜೀವನ ನಡೆಸಿದಾಗ ಅವರಿಗೆ ನಿಜವಾದ ಸ್ವಾತಂತ್ರ್ಯ ಸಿಗುತ್ತದೆ. ತಮಗೆಲ್ಲರಿಗೂ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಶುಭಾಶಯಗಳು ಎಂದು ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕೊಪ್ಪಳ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ್ ಎಸ್. ದರಗದ ಅವರು ಮುಖ್ಯ ಅಥಿತಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಭೇಟಿ ಬಚಾವೋ. ಬೇಟಿ ಪಡಾವೋ ಕಾರ್ಯಕ್ರಮ ಕಳೆದ 10 ವರ್ಷಗಳಿಂದ ಆಚರಣೆ ಮಾಡುತ್ತಾ ಬರುತ್ತಿದ್ದಾರೆ. ಇದರಿಂದ ಮಹಿಳೆಯರಿಗೆ ಅನುಕೂಲವಾಗಿದೆ. ನಮ್ಮ ಸಮಾಜದಲ್ಲಿ ಹೆಣ್ಣು ಮಗು ಬೇಡ ಗಂಡು ಮಗು ಬೇಕು ಎಂಬ ಅಭಿಪ್ರಾಯ ಇದೆ. ಇಲ್ಲಿ ಇಬ್ಬರ ಪಾತ್ರವು ಬಹಳ ಮುಖ್ಯ. ಮಕ್ಕಳಿಗೆ ಶಿಕ್ಷಣದ ಜೊತೆಗೆ ನೈತಿಕ ಶಿಕ್ಷಣ ಕೊಡಬೇಕು. ಮಹಿಳೆಯರು ಆರ್ಥಿಕವಾಗಿ ಸಮಾಜದಲ್ಲಿ ಸಬಲರಾಗಬೇಕು. ಶೈಕ್ಷಣಿಕವಾಗಿ. ರಾಜಕೀಯ ವಾಗಿ ಮುಂದೆ ಬರಬೇಕು. ಬಾಲ್ಯ ವಿವಾಹಗಳನ್ನು ಎಲ್ಲರೂ ತಡೆಯಬೇಕು. ಅಕ್ಕ ಮಾಹಾದೇವಿ ಹೇಳಿದಂತೆ ನಮ್ಮೊಳಗೆ ಸುಳಿವ ಆತ್ಮ ಗಂಡು ಅಲ್ಲ ಹೆಣ್ಣು ಅಲ್ಲ, ಪುರುಷ ಹಾಗೂ ಮಹಿಳೆಯರು ಸರಿ ಸಮಾನರಾಗಿದ್ದಾರೆ. ತಾವು ಉನ್ನತ ಹುದ್ದೆಗಳಿಗೆ ಹೋಗಬೇಕು. ಅಂದಾಗ ಕಾಯ್ದೆ ಕಾನೂನುಗಳನ್ನು ತಾವೇ ರೂಪಿಸುತ್ತಿರಾ ಎಂದು ಹೇಳಿದರು.

ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ನಮ್ಮ ದೇಶ ಉಜ್ವಲವಾಗಿ ಬೆಳೆಯ ಬೇಕಾದರೆ ಮಹಿಳೆ ಅಥವಾ ತಾಯಿಯ ಪಾತ್ರ ಬಹಳ ಮುಖ್ಯ ಇದೆ. ಅನೇಕ ಮಹಿಳೆಯರು ದೇಶಕ್ಕಾಗಿ ತ್ಯಾಗ ಬಲಿದಾನಗಳನ್ನು ಮಾಡಿದ್ದಾರೆ. ವೀರರಾಣಿ ಕಿತ್ತೂರು ಚೆನ್ನಮ್ಮ. ಓನಕೆ ಓಬವ್ವ ಸೇರಿದಂತೆ ಹಲವಾರು ಮಹಿಳಾ ಹೋರಾಟ ಗಾರರನ್ನು ನಾವು ಕಾಣುತ್ತೇವೆ. ತಾಯಿ ಕಲಿತರೆ ಇಡೀ ಕುಟುಂಬ ಕಲಿಯುತ್ತದೆ ಹಾಗಾಗಿ ಮಹಿಳೆಯರು ಶಿಕ್ಷಣ ಪಡೆಯುವುದು ಅತ್ಯವಶ್ಯಕವಾಗಿದೆ. ಯಾವ ದೇಶದಲ್ಲಿ ಮಹಿಳೆಯರಿಗೆ ಪ್ರೋತ್ಸಾಹ ನೀಡುವುದಿಲ್ಲವೋ ಆ ದೇಶ ಮುಂದೆ ಬರಲು ಸಾಧ್ಯವಿಲ್ಲ ಎಂದು ಹೇಳಿದರು.

ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ. ರವೀಂದ್ರನಾಥ ಅವರು, ಹೆಣ್ಣು ಭ್ರೂಣಲಿಂಗ ಹತ್ಯೆಯಿಂದಾಗುವ ದುಷ್ಪರಿಣಾಮ ಕುರಿತು ವಿಶೇಷ ಉಪನ್ಯಾಸ ನೀಡಿದರು. ಯುನಿಸೇಫ್ ಸಂಯೋಜಕರಾದ ಹರೀಶ್ ಜೋಗಿ ಬಾಲ್ಯವಿವಾಹ ತಡೆಗಟ್ಟುವ ಕುರಿತು ಮಾತನಾಡಿದರು.


ಬೇಟಿ ಬಚಾವೋ ಬೇಟಿ ಪಡಾವೋ ಅಭಿಯಾನದ ಸಹಿ ಸಂಗ್ರಹಣೆಗೆ ಜಿಲ್ಲಾಧಿಕಾರಿಗಳು ಚಾಲನೆ ನೀಡಿದರು. ಅಂಗನವಾಡಿ ಚಿಣ್ಣರ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಹಲಗೇರಿ 3ನೇ ಅಂಗನವಾಡಿ ಕೇಂದ್ರದ ಮಗು ಪ್ರತಿಕ್ಷಾ ಸಂವಿಧಾನ ಪೀಠಿಕೆಯ ಓದುವ ಮೂಲಕ ಎಲ್ಲರ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಪರಶುರಾಮ ವಾಯ್ ಶೆಟ್ಟೆಪ್ಪನವರ, ಜಿಲ್ಲಾ ನಿರೂಪಣಾಧಿಕಾರಿ ಗಂಗಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಅನ್ನಪೂರ್ಣಾ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತ ಪೂಜಾರ, ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿ ಅನಿತಾ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿ ಹಾಗೂ ಸಿಬ್ಬಂದಿಗಳು. ಅಂಗನವಾಡಿ ಕಾರ್ಯ ಕರ್ತರು. ಅಂಗನವಾಡಿ ಕೇಂದ್ರಗಳ ಮಕ್ಕಳು. ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿನಿಯರು ಸೇರಿದಂತೆ ಇತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಜಾಥಾ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಅವರು ಜಿಲ್ಲಾಡಳಿತ ಭವನದ ಆವರಣದಿಂದ ಚಾಲನೆ ನೀಡಿದರು. ಈ ಜಾಥಾ ಕಾರ್ಯಕ್ರಮ ಜಿಲ್ಲಾಡಳಿತ ಭವನದ ಆವರಣದಿಂದ ಜಿಲ್ಲಾ ಆಸ್ಪತ್ರೆಯವರೆಗೆ ನಡೆಯಿತು. ಇದರಲ್ಲಿ ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಸಸಿಗಳನ್ನು ನೆಡಲಾಯಿತು.




## ಆನಂದ ಬಾಣ




### ಇಂದು ಹೊಸಪೇಟೆಗೆ ಸಚಿವ ಜಮೀರ್ ಅಹ್ಮದ್ ಖಾನ್, ಹಂಪಿ ಉತ್ಸವ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**



ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಜ.26ರ ಸಂಜೆ 7ಕ್ಕೆ ಟಿಬಿಡ್ಯಾಂ ವೈಕುಂಠ ಅತಿಥಿಗೃಹಕ್ಕೆ ಆಗಮಿಸಲಿದ್ದಾರೆ. ಅಲ್ಲಿಯೇ ಜಿಲ್ಲಾಧಿಕಾರಿಗಳೊಂದಿಗೆ ಹಂಪಿ ಉತ್ಸವ–2025 ಹಾಗೂ ಡಿಎಂಎಫ್ ಯೋಜನೆಗಳಿಗೆ ಸಂಬಂಧಿಸಿದಂತೆ ಸಭೆ ನಡೆಸಲಿದ್ದಾರೆ. ಜ.26 ರಂದು ಬೆಳಿಗ್ಗೆ 9ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ಗಣರಾಜ್ಯೋತ್ಸವ ದಿನಾಚರಣೆ–ದ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ನಂತರ ಮಧ್ಯಾಹ್ನ 12 ಗಂಟೆಗೆ ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ ಕಾರ್ಯನಿರತ ಪತ್ರಕರ್ತರಿಗೆ ಹಕ್ಕುಪತ್ರ ವಿತರಣಾ ಕಾರ್ಯಕ್ರಮ ಹಾಗೂ ಕೊಪ್ಪಳ ವಿಧಾನಸಭಾ ಕ್ಷೇತ್ರ ಶಾಸಕರು ಆಯೋಜಿಸಿರುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರು. ನಂತರ ಅಂದು ಮಧ್ಯಾಹ್ನ 3 ಗಂಟೆಗೆ ಕೊಪ್ಪಳದಿಂದ ರಸ್ತೆ ಮೂಲಕ ಹೊಸಪೇಟೆಗೆ ಪ್ರಯಾಣ ಬೆಳಸುವರು ವಾಸ್ತವ್ಯ ಮಾಡಲಿದ್ದಾರೆ. ಜ.27 ರಂದು ವಿಜಯನಗರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜನತಾ ದರ್ಶನದಲ್ಲಿ ಪಾಲ್ಗೊಳ್ಳುವರು. ಬೆಳಿಗ್ಗೆ 11ಕ್ಕೆ ಕೆಡಿಪಿ ಸಭೆ, ಮಧ್ಯಾಹ್ನ 2 ರಿಂದ 2.30ರವರೆಗೆ ಹಂಪಿ ಉತ್ಸವ–2025 ಹಾಗೂ ಡಿಎಂಎಫ್ ಯೋಜನೆಗಳಿಗೆ ಸಂಬಂಧಿಸಿದಂತೆ ಸಂಸದರು, ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರೊಂದಿಗೆ ಸಭೆ ನಡೆಸಲಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES

BOOK YOUR ADVERTISEMENTS
TO REACH MORE AUIDIENCE

Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)

Display Advertisements
Examples: Brand promotions, Product launches, Corporate announcements

Public Notices and Announcements
Examples: Tender notices, Government announcements, Legal notices, Obituaries

Recruitment Advertisements
Examples: Company job openings, Walk-in interviews, Recruitment drives

Health and Wellness Advertisements
Examples: Hospitals or clinics, Medical equipment, Health supplements

Educational Advertisements
Examples: College admissions, Coaching center promotions, Training programs

Event Advertisements
Examples: Cultural programs, Exhibitions, Concerts or festivals

Retail Advertisements
Examples: Sales or discounts, New store openings

Entertainment Advertisements
Examples: Movie releases, TV show promotions, Theater events

Political Advertisements
Campaigns or announcements related to political parties or candidates.

Real Estate Advertisements
Ads for buying, selling, or renting property.

Matrimonial Advertisements
Personal ads for seeking marriage alliances. Examples: Bride or groom profiles, Community-specific ads

Product Advertisements
Examples: Electronics, Automobiles, FMCG products

contact for more information
M: 94486 33038
Email:- hampitimes@gmail.com